ಕರ್ನಾಟಕ ಸರ್ಕಾರ

**ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್**

(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ)

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಟಿಟಿಎಂಸಿ 'ಎ' ಬ್ಲಾಕ್, 4ನೇ ಮಹಡಿ, ಶಾಂತಿನಗರ, ಕೆ.ಹೆಚ್. ರೋಡ್, ಬೆಂಗಳೂರು – 560 027

ದೂರವಾಣಿ ಸಂ: 22536200, ಫ್ಯಾಕ್ಸ್ ಸಂ: 22536221,

E-mail: ed.sast-hfw@karnataka.gov.in,

# ಮಾಹಿತಿ ಹಕ್ಕು ಅಧಿನಿಯಮ-2005ರ

# ಸೆಕ್ಷನ್ 4(1)(ಬಿ) ಅನ್ವಯ ಮಾಹಿತಿ

## 1. ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ ರಚನೆ, ಕಾರ್ಯಗಳು ಮತ್ತು ಕರ್ತವ್ಯಗಳ ವಿವರಗಳು:

ಕರ್ನಾಟಕ ರಾಜ್ಯ ಸರ್ಕಾರವು ರಚಿಸಿದ ಕೆಲವು ಆರೋಗ್ಯ ಯೋಜನೆಗಳು ಮತ್ತು ರಾಷ್ಟ್ರದ ಆರೋಗ್ಯ ಯೋಜನೆಗಳನ್ನು ಜಾರಿಗೆ ತರಲು ರಾಜ್ಯ ಸರ್ಕಾರವು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಡಿಯಲ್ಲಿ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ್ನು ಸ್ಥಾಪನೆ ಮಾಡಿರುತ್ತದೆ. ಈ ಸಂಸ್ಥೆಯನ್ನು ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಹೆಚ್‌ಎಫ್‌ಡಬ್ಲ್ಯೂ/216/ಸಿಜಿಇ/2008, ದಿನಾಂಕ 20-2-2009 ರಡಿ ಸ್ಥಾಪನೆ ಮಾಡಿರಲಾಗಿರುತ್ತದೆ. ಭಾರತೀಯ ಟ್ರಸ್ಟ್ ಕಾಯ್ದೆ 1882ರ ಅಡಿಯಲ್ಲಿ ದಿನಾಂಕ 15-4-2009 ರಂದು ಇದನ್ನು ನೊಂದಣಿ ಮಾಡಲಾಗಿರುತ್ತದೆ. ಮಾನ್ಯ ಮುಖ್ಯಮಂತ್ರಿಯವರು ಟ್ರಸ್ಟ್‌ನ ಮಹಾಪೋಷಕರು ಆಗಿದ್ದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮಾನ್ಯ ಸಚಿವರು ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆಯ ಮಾನ್ಯ ಸಚಿವರು ಪೋಷಕರು ಆಗಿರುತ್ತಾರೆ. ಆರೋಗ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಟ್ರಸ್ಟ್‌ನ ಅಧ್ಯಕ್ಷರಾಗಿದ್ದು, ಕಾರ್ಯಕಾರಿ ನಿರ್ದೇಶಕರು ಇದರ ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ. ಬೇರೆ ಇಲಾಖೆಗಳ ಪ್ರಧಾನ ಕಾರ್ಯದರ್ಶಿಯವರು, ಹಿರಿಯ ಅಧಿಕಾರಿಗಳು, ಆರ್ಥಿಕ ತಜ್ಞರು, ಹೆಸರಾಂತ ತಜ್ಞ ವೈದ್ಯರು ಟ್ರಸ್ಟಿಗಳಾಗಿರುತ್ತಾರೆ. ಯೋಜನೆಗಳ ಸಮರ್ಪಕ ಅನುಷ್ಠಾನಕ್ಕಾಗಿ ಕಾರ್ಯಕಾರಿ ಸಮಿತಿ ಮತ್ತು ನೋಂದಾವಣೆ ಮತ್ತು ಶಿಸ್ತು ಸಮಿತಿಗಳನ್ನು ರಚಿಸಲಾಗಿರುತ್ತದೆ.

## "ಆರೋಗ್ಯ ಕರ್ನಾಟಕ"

ಸರ್ಕಾರವು ದಿನಾಂಕ 1.3.2018ರಂದು ಹಲವಾರು ಆರೋಗ್ಯ ಯೋಜನೆಗಳನ್ನು ಒಗ್ಗೂಡಿಸಿ **"ಆರೋಗ್ಯ ಕರ್ನಾಟಕ"** ಯೋಜನೆಯನ್ನು ಅನುಷ್ಠಾನಗೊಳಿಸಿದ್ದು ಸದರಿ ಯೋಜನೆಯಡಿ ಕರ್ನಾಟಕ ರಾಜ್ಯದ ಎಲ್ಲಾ ನಿವಾಸಿಗಳಿಗೆ ಸರ್ಕಾರಿ ಹಾಗೂ ಖಾಸಗಿ ನೊಂದಾಯಿತ ಆಸ್ಪತ್ರೆಗಳಲ್ಲಿ ನಿಗದಿತ ಪ್ಯಾಕೇಜ್ ದರದಂತೆ ಪ್ರತಿ ಕುಟುಂಬಕ್ಕೆ (ಐದು ಸದಸ್ಯರವರೆಗಿನ) ಪ್ರಾಥಮಿಕ ಆರೋಗ್ಯ ಆರೈಕೆ, ಸಾಮಾನ್ಯ ದ್ವಿತೀಯ ಹಂತದ ಆರೈಕೆ, ಸಂಕೀರ್ಣ ದ್ವಿತೀಯ ಹಂತದ ಆರೈಕೆ, ತೃತೀಯ ಹಂತದ ಆರೈಕೆ ಮತ್ತು ತುರ್ತು ಆರೋಗ್ಯ ಆರೈಕೆಗಳನ್ನು ಭವರಸೆ ಮಾದರಿಯಲ್ಲಿ ಒದಗಿಸಲಾಗುವುದು. ಆಹಾರ ಭದ್ರತಾ ಕಾಯ್ದೆ 2013ರನ್ವಯ ಅರ್ಹ ಕುಟುಂಬಗಳ ಸದಸ್ಯರು ಈ ಯೋಜನೆಯಲ್ಲಿ "ಅರ್ಹತಾ ರೋಗಿ" ಎಂದು ಕರೆಯಲಾಗಿದ್ದು, ಅವರಿಗೆ ಬಹುಮಟ್ಟಿಗೆ ಉಚಿತ ಚಿಕಿತ್ಸೆ ನೀಡಲಾಗುವುದು. ಆಹಾರ ಭದ್ರತಾ ಕಾಯ್ದೆ 2013 ರನ್ವಯ ಆದ್ಯೇತರ ಕುಟುಂಬದ ಸದಸ್ಯರು ಈ

ಯೋಜನೆಯಲ್ಲಿ "ಸಾಮಾನ್ಯ ರೋಗಿ" ಎಂದು ಕರೆಯಲಾಗಿದ್ದು ಅವರಿಗೆ ಸಹಪಾವತಿ ಆಧಾರದಲ್ಲಿ ಚಿಕಿತ್ಸೆ ನೀಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ-104/ಕಾಲ್ ಸೆಂಟರ್ ಸಂಖ್ಯೆ-1800-425-2646/1800-425-8330 ಅನ್ನು ಸಂಪರ್ಕಿಸಬಹುದು ಅಥವಾ ಯೋಜನೆಯ ವಿವರಗಳನ್ನು www.sast.gov.in/home ವೆಬ್‌ಸೈಟ್‌ನಲ್ಲಿ ಪಡೆಯಬಹುದು.

## "ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ"

- ರಾಜ್ಯದ ಎಲ್ಲ ನಿವಾಸಿಗಳಿಗೆ "ಆರೋಗ್ಯ ಕರ್ನಾಟಕ" ಎಂಬ ಸಾರ್ವತ್ರಿಕ ಆರೋಗ್ಯ ರಕ್ಷಣಾ ಯೋಜನೆಯನ್ನು ಕರ್ನಾಟಕ ಸರ್ಕಾರವು ದಿನಾಂಕ: 02.03.2018 ರಿಂದ ಅನುಷ್ಠಾನಗೊಳಿಸುತ್ತಿತ್ತು.
- ನಂತರ ಭಾರತ ಸರ್ಕಾರವು "ಆಯುಷ್ಮಾನ್ ಭಾರತ್" ಯೋಜನೆಯನ್ನು ಜಾರಿಗೊಳಿಸಿರುತ್ತದೆ.
- ಈ ಎರಡೂ ಯೋಜನೆಗಳ ಉದ್ದೇಶ, ವ್ಯಾಪ್ತಿಗಳಲ್ಲಿ ಹೋಲಿಕೆ ಇರುವುದರಿಂದ ಎರಡೂ ಯೋಜನೆಗಳನ್ನು ಸಂಯೋಜಿಸಿ **'ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ'** ಎಂಬ ಯೋಜನೆಯನ್ನು ಭರವಸೆ ಮಾದರಿಯಲ್ಲಿ ದಿನಾಂಕ: 30.10.2018 ರಿಂದ ಅನುಷ್ಠಾನಗೊಳಿಸಲಾಗುತ್ತಿದೆ.

**ಅರ್ಹತೆ**

- ಬಿಪಿಎಲ್ ಪಡಿತರ ಕಾರ್ಡು (ಬಿಪಿಎಲ್) ಹೊಂದಿರುವವರು ಹಾಗೂ ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆಯಲ್ಲಿ (ಆರ್.ಎಸ್.ಬಿ.ವೈ) ನೋಂದಾಯಿತವಾಗಿರುವ ಫಲಾನುಭವಿಗಳಿಗೆ ಒಂದು ವರ್ಷಕ್ಕೆ **ರೂ.5.00 ಲಕ್ಷಗಳವರೆಗೆ** ಉಚಿತ ಚಿಕಿತ್ಸೆ ಲಭ್ಯ.
- ರಾಷ್ಟ್ರೀಯ ಆಹಾರ ಭದ್ರತಾ ಕಾಯಿದೆ-2013ರ ಅಡಿಯಲ್ಲಿ ಬಿಪಿಎಲ್ ವರ್ಗಕ್ಕೆ ಸೇರಿಲ್ಲದವರು ಹಾಗೂ ಅರ್.ಎಸ್.ಬಿ.ವೈ ಅಡಿಯಲ್ಲಿ ನೋಂದಾವಣೆ ಮಾಡಿಲ್ಲದವರಿಗೆ ಸಹ-ಪಾವತಿ ಆಧಾರದ ಮೇಲೆ ಸರ್ಕಾರಿ ಪ್ಯಾಕೇಜ್ ದರದ 30% ರಷ್ಟು ಚಿಕಿತ್ಸಾ ವೆಚ್ಚ ಲಭ್ಯವಿದ್ದು, ವಾರ್ಷಿಕ ಮಿತಿ ಪ್ರತಿ ಕುಟುಂಬಕ್ಕೆ **ರೂ.1.50 ಲಕ್ಷ** ಇರುತ್ತದೆ.
- ಪಡಿತರ ಚೀಟಿ ಮತ್ತು ಆಧಾರ್ ಕಾರ್ಡ್‌ಗಳು ಅರ್ಹತಾ ಮಾನದಂಡಗಳಾಗಿವೆ

**ಯಾವ ಚಿಕಿತ್ಸೆಗಳು ಲಭ್ಯ..?**

- ಸಂಯೋಜಿತ ಯೋಜನೆಯಲ್ಲಿ 1650 ಚಿಕಿತ್ಸಾ ವಿಧಾನಗಳು ಒಳಗೊಂಡಿರುತ್ತವೆ.
- ಪ್ರಾಥಮಿಕ ಚಿಕಿತ್ಸೆಗಳು ಮತ್ತು ಸರಳ ದ್ವಿತೀಯ ಹಂತದ 291 ಚಿಕಿತ್ಸೆಗಳನ್ನು ಸಾರ್ವಜನಿಕ ಆರೋಗ್ಯ ಸಂಸ್ಥೆಗಳಲ್ಲಿ ಮಾತ್ರ ನೀಡಲಾಗುತ್ತದೆ.
- ಕ್ಲಿಷ್ಟಕರ ದ್ವಿತೀಯ ಹಂತದ 254 ಚಿಕಿತ್ಸಾ ವಿಧಾನಗಳು, ತೃತೀಯ ಹಂತದ 900 ಚಿಕಿತ್ಸಾ ವಿಧಾನಗಳು ಹಾಗೂ 169 ತುರ್ತು ಚಿಕಿತ್ಸೆಗಳನ್ನು ಸಾರ್ವಜನಿಕ ಆರೋಗ್ಯ ಸಂಸ್ಥೆಗಳು ಮತ್ತು ನೋಂದಾಯಿತ ಖಾಸಗಿ ಆಸ್ಪತ್ರೆಗಳಲ್ಲಿ ಒದಗಿಸಲಾಗುತ್ತದೆ.
- ಕ್ಲಿಷ್ಟಕರ ದ್ವಿತೀಯ ಹಂತದ ಚಿಕಿತ್ಸೆಗಳು ಮತ್ತು ತೃತೀಯ ಹಂತದ ಚಿಕಿತ್ಸೆಗಳಿಗೆ ಸಾರ್ವಜನಿಕ ಆರೋಗ್ಯ ಸಂಸ್ಥೆಗಳಿಂದ ರೆಫರಲ್ ಪಡೆಯಬೇಕಿರುತ್ತದೆ.
- 169 ತುರ್ತು ಚಿಕಿತ್ಸೆಗಳಿಗೆ ಯಾವುದೇ ರೆಫರಲ್ ಇಲ್ಲದೆ ನೇರವಾಗಿ ತಾವು ಇಚ್ಛಿಸುವ ನೋಂದಾಯಿತ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆಯಬಹುದು.

**ಆರೋಗ್ಯ ಕಾರ್ಡ್ ಎಲ್ಲಿ ನೀಡಲಾಗುತ್ತದೆ?**

- ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ ಯೋಜನೆಯ ಅಡಿಯಲ್ಲಿ "ಎಬಿ–ಎಆರ್‌ಕೆ" ಕಾರ್ಡ್‌ನ್ನು ಸಾರ್ವಜನಿಕ ಆರೋಗ್ಯ ಸಂಸ್ಥೆಗಳಲ್ಲಿ ರೂ.10/– ಶುಲ್ಕದೊಂದಿಗೆ ನೀಡಲಾಗುತ್ತದೆ.
- ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಕೇಂದ್ರಗಳಲ್ಲಿ ರೂ. 35/– ಶುಲ್ಕದೊಂದಿಗೆ "ಎಬಿ–ಎಆರ್‌ಕೆ" ಕಾರ್ಡ್ ಪಡೆದುಕೊಳ್ಳಬಹುದು
- ಆಧಾರ್ ಕಾರ್ಡ್ ಮತ್ತು ಪಡಿತರ ಕಾರ್ಡ್‌ಗಳನ್ನು ಹಾಜರು ಪಡಿಸಿ ಆರೋಗ್ಯ ಕಾರ್ಡ್ ಪಡೆಯಬಹುದು.

**ಯೋಜನೆಯ ಸೌಲಭ್ಯ ಪಡೆಯುವುದು ಹೇಗೆ?**

- ರೋಗಿಗಳು ತಮ್ಮ ಪಡಿತರ ಚೀಟಿ ಮತ್ತು ಆಧಾರ್ ಕಾರ್ಡ್‌ನೊಂದಿಗೆ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ಹೋಗಬೇಕು.
- ಯೋಜನೆಯಲ್ಲಿ ನೋಂದಣಿ ಮಾಡಿ ಎಬಿ–ಎಆರ್‌ಕೆ ಆರೋಗ್ಯ ಕಾರ್ಡ್ ಪಡೆಯಬಹುದು.
- ಸದರಿ ಸರ್ಕಾರಿ ಆಸ್ಪತ್ರೆಯಲ್ಲಿ ತಪಾಸಣೆ ಮಾಡಿಸಿಕೊಳ್ಳಬೇಕು.
- ಅದೇ ಸರ್ಕಾರಿ ಆಸ್ಪತ್ರೆಯು ಚಿಕಿತ್ಸೆ ನೀಡುವ ಸಾಮರ್ಥ್ಯ ಹೊಂದಿದ್ದಲ್ಲಿ ಅಲ್ಲಿಯೇ ರೋಗಿಗೆ ಚಿಕಿತ್ಸೆ ನೀಡಲಾಗುತ್ತದೆ.
- ಸದರಿ ಸರ್ಕಾರಿ ಆಸ್ಪತೆಯು ಚಿಕಿತ್ಸೆ ನೀಡುವ ಸಾಮರ್ಥ್ಯವನ್ನು ಹೊಂದಿಲ್ಲದಿದ್ದರೆ ರೆಫರಲ್ ನೀಡಲಾಗುತ್ತದೆ. ರೆಫರಲ್ ಪಡೆದುಕೊಂಡ ರೋಗಿಯು ತಾನು ಇಚ್ಚಿಸುವ ಯಾವುದೇ ನೋಂದಾಯಿತ ಖಾಸಗಿ ಅಥವಾ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಬಹುದು.
- ತುರ್ತು ಚಿಕಿತ್ಸೆಗಳಿಗೆ ಯಾವುದೇ ರೆಫರಲ್ ಇಲ್ಲದೆ ನೇರವಾಗಿ ನೋಂದಾಯಿತ ಖಾಸಗಿ ಅಥವಾ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆಯಬಹುದು.
- ರೋಗಿಯ ಆರೋಗ್ಯ ಸ್ಥಿತಿ ಸ್ಥಿರಗೊಂಡ ಕೂಡಲೇ ಚಿಕಿತ್ಸೆ ನೀಡಿದ ಆಸ್ಪತ್ರೆಗೆ ಪಡಿತರ ಚೀಟಿಯನ್ನು ಸಲ್ಲಿಸತಕ್ಕದ್ದು.

**ಅನುದಾನ ಹಂಚಿಕೆ ವಿವರ:**

- 'ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ' ಯೋಜನೆಯಡಿಯಲ್ಲಿ ರಾಜ್ಯದ 115 ಲಕ್ಷ (ಬಿಪಿಎಲ್) ಕುಟುಂಬಗಳ ಪೈಕಿ 62 ಲಕ್ಷ ಕುಟುಂಬಗಳಿಗೆ (ಆರ್.ಎಸ್.ಬಿ.ವೈ ನೋಂದಾಯಿತ) ಮಾತ್ರ ಕೇಂದ್ರ ಸರ್ಕಾರವು ಶೇ.60 ರಷ್ಟು ಅನುದಾನ ಭರಿಸುತ್ತದೆ. ರಾಜ್ಯ ಸರ್ಕಾರವು ಶೇ.40 ರಷ್ಟು ಅನುದಾನ ಭರಿಸುತ್ತದೆ. ಇನ್ನುಳಿದ 53 ಲಕ್ಷ ಕುಟುಂಬಗಳಿಗೆ ರಾಜ್ಯ ಸರ್ಕಾರವೇ ಶೇ.100 ರಷ್ಟು ವೆಚ್ಚ ಭರಿಸುತ್ತದೆ.
- ಸಾಮಾನ್ಯ ವರ್ಗದ 19 ಲಕ್ಷ ಕುಟುಂಬಗಳಿಗೂ ಸಹ ರಾಜ್ಯ ಸರ್ಕಾರವೇ ಶೇ.100 ರಷ್ಟು ಅನುದಾನ ಭರಿಸುತ್ತದೆ.

# ‘ಅಂಗಾಂಗ ಕಸಿ ಯೋಜನೆ’

ರಾಜ್ಯ ಸರ್ಕಾರವು ಬಡವರು/ಬಿಪಿಎಲ್ ರೋಗಿಗಳಿಗೆ ಅಂಗಾಂಗ ಕಸಿ ಯೋಜನೆಯನ್ನು ಸರ್ಕಾರಿ ಆದೇಶ ಸಂಖ್ಯೆ: ಹೆಚ್.ಎಫ್.ಡಬ್ಲ್ಯೂ/64/ಇಪಿಎಫ್/2018 ಅನ್ವಯ ದಿನಾಂಕ: 3.12.2018 ರಿಂದ ಜಾರಿಗೊಳಿಸಿದೆ.

- ಈ ಯೋಜನೆಯು ಬಿಪಿಎಲ್ ರೋಗಿಗಳಿಗೆ ಮಾತ್ರ ಅನ್ವಯಿಸುತ್ತದೆ. ರೋಗಿಯು ತಮ್ಮ ಹತ್ತಿರದ ಸಂಬಂಧಿಯಿಂದ ಅಂಗಾಂಗ ದಾನ ಪಡೆದುಕೊಂಡಾಗ ಅಂತಹ ಅಂಗಾಂಗ ಕಸಿ ಶಸ್ತ್ರಚಿಕಿತ್ಸೆಯನ್ನು ಸಂಬಂಧಿಸಿದ ನೋಂದಾಯಿತ ಸರ್ಕಾರಿ ಆಸ್ಪತ್ರೆಗಳಲ್ಲಿ (ಇನ್ಸ್ಟಿಟ್ಯೂಟ್ ಆಫ್ ನೆಫ್ರೋ ಯುರಾಲಜಿ, ಶ್ರೀ.ಜಯದೇವ ಇನ್ಸ್ಟಿಟ್ಯೂಟ್ ಆಫ್ ಕಾರ್ಡಿಯೋಲಜಿ, ಪಿ.ಎಂ.ಎಸ್.ಎಸ್.ವೈ, ಇನ್ಸ್ಟಿಟ್ಯೂಟ್ ಆಫ್ ಗ್ಯಾಸ್ಟ್ರೋ ಎಂಟೆರಾಲಜಿ) ಮಾಡಲಾಗುವುದು.
- ಒಂದೊಮ್ಮೆ ಸರ್ಕಾರಿ ಆಸ್ಪತ್ರೆಯು ಅಂಗಾಂಗ ಕಸಿ ಶಸ್ತ್ರಚಿಕಿತ್ಸೆ ಮಾಡುವ ಸಾಮರ್ಥ್ಯ ಹೊಂದಿಲ್ಲದಿದ್ದಲ್ಲಿ ನೋಂದಾಯಿತ ಖಾಸಗಿ ಆಸ್ಪತ್ರೆಗೆ ರೆಫರ್ ಮಾಡಲಾಗುವುದು.
- ಮೃತ ಶರೀರ (ಮೆದುಳು ನಿಷ್ಕ್ರೀಯಗೊಂಡ) ಕಸಿ ಪ್ರಕರಣದಲ್ಲಿ ಅಂಗಾಂಗ ಪುನರ್ ಕೇಂದ್ರದಲ್ಲಿ ಸ್ವೀಕರಿಸುವವರ ಮತ್ತು ಲಭ್ಯತೆಯ ನೋಂದಣಿ ಪ್ರಕಾರ ಸರ್ಕಾರಿ ಅಥವಾ ಖಾಸಗಿ ನೋಂದಾಯಿತ ಆಸ್ಪತ್ರೆಗಳಲ್ಲಿ ಅಂಗಾಂಗ ಕಸಿ ಶಸ್ತ್ರ ಚಿಕಿತ್ಸೆಯನ್ನು ನಡೆಸಬಹುದು.
- ಚಿಕಿತ್ಸಾ ವಿಧಾನಗಳ ಪೂರ್ವಾನುಮತಿ ಪ್ರಕ್ರೀಯೆ ಮತ್ತು ಸ್ವೀಕರಿಸುವ ಬಿಪಿಎಲ್/ಬಡವರು ಮುಂತಾದ ಅನ್ವಯಿಸುವ ಸ್ಥಿತಿಗತಿಗಳ ಕುರಿತಂತೆ ಜೀವ ಸಾರ್ಥಕತೆ ಸೊಸೈಟಿಯ ಹಂಚಿಕೆ ನೀತಿಯನ್ನು ಅನುಸರಿಸಲಾಗುವುದು.

**ಅರ್ಹತೆ:**

- ಕರ್ನಾಟಕ ರಾಜ್ಯದ ಬಡವರು/ಬಿಪಿಎಲ್ ರೋಗಿಗಳನ್ನು ಬಿಪಿಎಲ್ ಕಾರ್ಡ್ ಮತ್ತು ಆಧಾರ್ ಕಾರ್ಡ್‌ಗಳ ಆಧಾರದಲ್ಲಿ ಗುರುತಿಸಲಾಗುವುದು.

ಫಲಾನುಭವಿಯು ಮೌಲ್ಯಮಾಪನದ ನಂತರ ಅಂಗಾಂಗ ಕಸಿಗಾಗಿ ನೋಂದಣಿ ಮಾಡಲು ಆಸ್ಪತ್ರೆಯ ಅಧಿಕೃತ ಸಮಿತಿಯಿಂದ (ಆಸ್ಪತ್ರೆ ಮಟ್ಟದ/ಜಿಲ್ಲಾ/ರಾಜ್ಯ ಮಟ್ಟದ) ಅನುಮೋದನೆ ಪಡೆದ ನಂತರ ಸಾರ್ವಜನಿಕ ಆರೋಗ್ಯ ಸಂಸ್ಥೆಗಳಿಗೆ (ಇನ್ಸ್ಟಿಟ್ಯೂಟ್ ಆಫ್ ನೆಫ್ರೋ ಯುರಾಲಜಿ, ಶ್ರೀ.ಜಯದೇವ ಇನ್ಸ್ಟಿಟ್ಯೂಟ್ ಆಫ್ ಕಾರ್ಡಿಯೋಲಜಿ, ಪಿ.ಎಂ.ಎಸ್.ಎಸ್.ವೈ, ಇನ್ಸ್ಟಿಟ್ಯೂಟ್ ಆಫ್ ಗ್ಯಾಸ್ಟ್ರೋ ಎಂಟೆರಾಲಜಿ) ಭೇಟಿ ನೀಡಬೇಕು.

**ರೆಫರಲ್ ವಿಧಾನ:**

- ಎಲ್ಲ ಸಾರ್ವಜನಿಕ ಆರೋಗ್ಯ ಸಂಸ್ಥೆಗಳು ಅಂಗಾಗ ಕಸಿ ರೋಗಿಗಳನ್ನು ಮೌಲ್ಯಮಾಪನ ಮಾಡಿ, ಮುಂದಿನ ಪ್ರಕ್ರಿಯೆಗಳಿಗಾಗಿ ಉತ್ಕೃಷ್ಟ ಕೇಂದ್ರ (ಇನ್ಸ್ಟಿಟ್ಯೂಟ್ ಆಫ್ ನೆಫ್ರೋ ಯುರಾಲಜಿ, ಶ್ರೀ.ಜಯದೇವ ಇನ್ಸ್ಟಿಟ್ಯೂಟ್ ಆಫ್ ಕಾರ್ಡಿಯೋಲಜಿ, ಪಿ.ಎಂ.ಎಸ್.ಎಸ್.ವೈ, ಇನ್ಸ್ಟಿಟ್ಯೂಟ್ ಆಫ್ ಗ್ಯಾಸ್ಟ್ರೋ ಎಂಟೆರಾಲಜಿ) ಆಸ್ಪತ್ರೆಗಳಿಗೆ ರೆಫರ್ ಮಾಡಬಹುದು.
- ಉತ್ಕೃಷ್ಟ ಕೇಂದ್ರ (ಇನ್ಸ್ಟಿಟ್ಯೂಟ್ ಆಫ್ ನೆಫ್ರೋ ಯುರಾಲಜಿ, ಶ್ರೀ.ಜಯದೇವ ಇನ್ಸ್ಟಿಟ್ಯೂಟ್ ಆಫ್ ಕಾರ್ಡಿಯೋಲಜಿ, ಪಿ.ಎಂ.ಎಸ್.ಎಸ್.ವೈ, ಇನ್ಸ್ಟಿಟ್ಯೂಟ್ ಆಫ್ ಗ್ಯಾಸ್ಟ್ರೋ ಎಂಟೆರಾಲಜಿ) ಆಸ್ಪತ್ರೆಗಳು ರೋಗಿಯನ್ನು ಮೌಲ್ಯಮಾಪನ ಮಾಡಿ, ಮೃತ ದೇಹ ಮತ್ತು ಮೆದುಳು ನಿಷ್ಕ್ರೀಯಗೊಂಡವರ ಅಂಗಾಂಗಕ್ಕೆ ಜೀವಸಾರ್ಥಕತೆಯಲ್ಲಿ ನೋಂದಣಿ ಮಾಡಿಕೊಳ್ಳಲು ರೋಗಿಗೆ ನಿರ್ದೇಶನ ನೀಡಬಹುದು.

- ರೋಗಿಯು ತನ್ನ ಹತ್ತಿರದ ಜೀವಂತ ಸಂಬಂಧಿಯ ಅಂಗವನ್ನು ಆಯ್ಕೆ ಮಾಡಿಕೊಂಡಿದ್ದಲ್ಲಿ ಉತ್ಕೃಷ್ಟ ಕೇಂದ್ರ (ಇನ್ಸ್‌ಟಿಟ್ಯೂಟ್ ಆಫ್ ನೆಫ್ರೋ ಯುರಾಲಜಿ, ಶ್ರೀ.ಜಯದೇವ ಇನ್ಸ್‌ಟಿಟ್ಯೂಟ್ ಆಫ್ ಕಾರ್ಡಿಯೋಲಜಿ, ಪಿ.ಎಂ.ಎಸ್.ಎಸ್.ವೈ, ಇನ್ಸ್‌ಟಿಟ್ಯೂಟ್ ಆಫ್ ಗ್ಯಾಸ್ಟ್ರೋ ಎಂಟೆರಾಲಜಿ) ಆಸ್ಪತ್ರೆಗಳಲ್ಲಿ ಅಂಗಾಂಗ ಕಸಿಗೆ ನೋಂದಾಯಿಸಬಹುದು. ಒಂದೊಮ್ಮೆ ಸಾಮರ್ಥ್ಯವಿಲ್ಲದಿದ್ದಲ್ಲಿ ನೋಂದಾಯಿತ ಖಾಸಗಿ ಆಸ್ಪತ್ರೆಗಳಿಗೆ ರೆಫರ್ ಮಾಡಬಹುದು.

**ಚಿಕಿತ್ಸಾ ಮೊತ್ತ:**

- ಕಿಡ್ನಿ ಅಂಗಾಂಗ ಕಸಿ ಶಸ್ತ್ರಚಿಕಿತ್ಸೆಗೆ ರೂ. 2.00 ಲಕ್ಷ + immunosuppression medication ವೆಚ್ಚ ರೂ.1.00 ಲಕ್ಷಗಳನ್ನು ಒಬ್ಬ ಫಲಾನುಭವಿಗೆ ಒಂದು ವರ್ಷಕ್ಕೆ ಒದಗಿಸಲಾಗುತ್ತದೆ.
- ಹೃದಯ ಅಂಗಾಂಗ ಕಸಿ ಶಸ್ತ್ರಚಿಕಿತ್ಸೆಗೆ ರೂ. 10.00 ಲಕ್ಷ + immunosuppression medication ವೆಚ್ಚ ರೂ.1.00 ಲಕ್ಷಗಳನ್ನು ಒಬ್ಬ ಫಲಾನುಭವಿಗೆ ಒಂದು ವರ್ಷಕ್ಕೆ ಒದಗಿಸಲಾಗುತ್ತದೆ.
- ಲಿವರ್ ಅಂಗಾಂಗ ಕಸಿ ಶಸ್ತ್ರಚಿಕಿತ್ಸೆಗೆ ರೂ. 11.00 ಲಕ್ಷ + immunosuppression medication ವೆಚ್ಚ ರೂ.1.00 ಲಕ್ಷಗಳನ್ನು ಒಬ್ಬ ಫಲಾನುಭವಿಗೆ ಒಂದು ವರ್ಷಕ್ಕೆ ಒದಗಿಸಲಾಗುತ್ತದೆ.

ಈ ಯೋಜನೆಯನ್ನು ಅನುಷ್ಠಾನಿಸಲು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ನೋಡಲ್ ಸಂಸ್ಥೆಯಾಗಿರುತ್ತದೆ. ಆಸ್ಪತ್ರೆಗಳ ನೊಂದಣಿ, ಪ್ರೀಆಥರೈಸೇಷನ್ ನೀಡುವುದು ಮತ್ತು ಅಂಗಾಂಗ ಕಸಿ ಶಸ್ತ್ರಚಿಕಿತ್ಸೆ ವೆಚ್ಚವನ್ನು ಆಸ್ಪತ್ರೆಗಳಿಗೆ ಪಾವತಿಸಲು 'ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ' ಯೋಜನೆಯ ಯಾಂತ್ರಿಕ ವ್ಯವಸ್ಥೆಯನ್ನು ಅನುಸರಿಸುವುದು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ ಜವಾಬ್ದಾರಿಯಾಗಿರುತ್ತದೆ.

**ಮಾಹಿತಿಗಾಗಿ ಯಾರನ್ನು ಸಂಪರ್ಕಿಸಬೇಕು**

- ಹತ್ತಿರದ ಸರ್ಕಾರಿ ಆಸ್ಪತ್ರೆ, ತಾಲೂಕು ಆಸ್ಪತ್ರೆಗಳು, ಜಿಲ್ಲಾ ಆಸ್ಪತ್ರೆಗಳು,
- ಸಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಗಳು,
- ಆಸ್ಪತ್ರೆಗಳಲ್ಲಿನ ಆರೋಗ್ಯ ಮಿತ್ರರು,
- ಆರೋಗ್ಯ ಸಹಾಯವಾಣಿ 104, ಟೋಲ್ ಫ್ರೀ ಸಂಖ್ಯೆ: 1800 425 8330
- ವೆಬ್ ಸೈಟ್: www.sast.gov.in, www.arogya.karnataka.gov.in

## 'ಜ್ಯೋತಿ ಸಂಜೀವಿನಿ' ಯೋಜನೆ

ರಾಜ್ಯ ಸರ್ಕಾರಿ ನೌಕರರು ಮತ್ತು ಅವರ ಕುಟುಂಬದ ಅವಲಂಬಿತ ಸದಸ್ಯರಿಗೆ ತೃತೀಯ ಹಂತದ ಚಿಕಿತ್ಸೆಗಳು ಮತ್ತು ತೃತೀಯ ಹಂತದ ತುರ್ತು ಚಿಕಿತ್ಸೆಗಳನ್ನು ಒದಗಿಸುವುದು 'ಜ್ಯೋತಿ ಸಂಜೀವಿನಿ' ಯೋಜನೆಯ ಉದ್ದೇಶವಾಗಿರುತ್ತದೆ.

ತೃತೀಯ ಹಂತದ 900 ಚಿಕಿತ್ಸಾ ವಿಧಾನಗಳು ಮತ್ತು 134 ತೃತೀಯ ತುರ್ತು ಚಿಕಿತ್ಸಾ ವಿಧಾನಗಳು ಸೇರಿದಂತೆ ಒಟ್ಟು 1034 ಚಿಕಿತ್ಸಾ ವಿಧಾನಗಳಿಗೆ ನೋಂದಾಯಿತ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳ ಮೂಲಕ ಚಿಕಿತ್ಸೆ ಒದಗಿಸಲಾಗುತ್ತದೆ. ನೋಂದಾಯಿತ ಆಸ್ಪತ್ರೆಗಳ ಪಟ್ಟಿಯು ವೆಬ್‌ಸೈಟ್ www.sast.gov.in/home ನಲ್ಲಿ ಲಭ್ಯವಿರುತ್ತದೆ.

**ಯೋಜನೆಯ ಫಲಾನುಭವಿಗಳು:** ರಾಜ್ಯ ಸರ್ಕಾರಿ ನೌಕರರು ಮತ್ತು ಅವರ ಕುಟುಂಬದ ಅವಲಂಭಿತ ಸದಸ್ಯರು ಯೋಜನೆಯ ಫಲಾನುಭವಿಗಳಾಗಿರುತ್ತಾರೆ.

**ಫಲಾನುಭವಿ ಸರ್ಕಾರಿ ನೌಕರನ ಗುರುತಿನ ಮಾನದಂಡ :** ರಾಜ್ಯ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಹೆಚ್‌ಆರ್‌ಎಂಎಸ್ ಡಾಟಾ ಬೇಸ್‌ನೊಂದಿಗೆ ಸಮನ್ವಯಿತಗೊಂಡಿರುವ ಸರ್ಕಾರಿ ನೌಕರನ ಕೆಜಿಐಡಿ ಪಾಲಿಸಿ ಸಂಖ್ಯೆಯು ಸರ್ಕಾರಿ ನೌಕರರ ಗುರುತಿನ ಮಾನದಂಡವಾಗಿರುತ್ತದೆ.

**ಅರ್ಹತೆ:** ರಾಜ್ಯ ಸರ್ಕಾರದ ನೌಕರರು ಮತ್ತು ಸರ್ಕಾರದ ಸೇವಾ ನಿಯಮಾವಳಿಗಳ ಅಡಿಯಲ್ಲಿ ಬರುವ ಅವರ ಕುಟುಂಬದ ಅವಲಂಭಿತ ಸದಸ್ಯರು ಈ ಯೋಜನೆಯ ವ್ಯಾಪ್ತಿಗೆ ಒಳಪಡುತ್ತಾರೆ. ಕರ್ನಾಟಕ ರಾಜ್ಯ ಸರ್ಕಾರಿ ನೌಕರರ (Medical Attendant) ನಿಯಮಾವಳಿ-1963ರ ನಿಯಮ 2(1)ರ(i)(ii) ಮತ್ತು (iii) ರನ್ವಯ ಸರ್ಕಾರಿ ನೌಕರರ ಕುಟುಂಬದ ಅವಲಂಭಿತ ಸದಸ್ಯರನ್ನು ಈ ಕೆಳಕಂಡಂತೆ ವ್ಯಾಖ್ಯಾನಿಸಲಾಗಿರುತ್ತದೆ:

(ಎ) ಸರ್ಕಾರಿ ನೌಕರನ ಪತ್ನಿ ಅಥವಾ ಪತಿ.

(ಬಿ) ಸರ್ಕಾರಿ ನೌಕರರ ತಂದೆ ಮತ್ತು ತಾಯಿ (ಮಲತಾಯಿ ಒಳಗೊಂಡಂತೆ)
ಇವರು ಸರ್ಕಾರಿ ನೌಕರನ ಜೊತೆಯಲ್ಲಿ ಸಾಮಾನ್ಯವಾಗಿ ವಾಸವಿರತಕ್ಕದ್ದು ಮತ್ತು ಇವರ ಮಾಸಿಕ ಆದಾಯ ಒಟ್ಟು ರೂ. 6,000/- ಗಳನ್ನು ಮೀರ ತಕ್ಕದ್ದಲ್ಲ.

(ಸಿ) ಸರ್ಕಾರಿ ನೌಕರನ ಮೇಲೆ ಸಂಪೂರ್ಣವಾಗಿ ಅವಲಂಭಿಸಿರುವ ಮಕ್ಕಳು (ದತ್ತು ಮಕ್ಕಳು ಮತ್ತು ಮಲ-ಮಕ್ಕಳು ಒಳಗೊಂಡಂತೆ) ಸರ್ಕಾರಿ ನೌಕರನು ತನ್ನ ಕುಟುಂಬದ ಸದಸ್ಯರ ಅವಲಂಬನೆಯ ಕುರಿತು ಪ್ರಮಾಣಿತ ಘೋಷಣೆಯನ್ನು ಸಲ್ಲಿಸತಕ್ಕದ್ದು.

ಈ ಕೆಳಕಾಣಿಸಿದ ಸಂದರ್ಭಗಳನ್ನು ಹೊರತುಪಡಿಸಿ ಫಲಾನುಭವಿಗಳಿಗೆ ಒದಗಿಸುವ ವೈದ್ಯಕೀಯ ನೆರವು ಸಂಪೂರ್ಣವಾಗಿ **ನಗದುರಹಿತ**ವಾಗಿರುತ್ತದೆ.

1) ಯೋಜನೆಯಲ್ಲಿ ನಿಗಧಿಪಡಿಸಿರುವ ಬೆನಿಫೀಟ್ ಪ್ಯಾಕೇಜ್‌ನ ದರಗಳಿಗಿಂತ ಹೆಚ್ಚು ದರದ ಸ್ಟೆಂಟ್, ಪ್ರೋಸ್ತೆಸಿಸ್ ಮತ್ತು ಇಂಪ್ಲಾಂಟ್ಸ್‌ಗಳ ಅಳವಡಿಕೆಯನ್ನು ಫಲಾನುಭವಿಯು ಬಯಸಿದ್ದಲ್ಲಿ/ಆಯ್ಕೆ ಮಾಡಿಕೊಂಡಲ್ಲಿ.
2) ಯೋಜನೆಯಲ್ಲಿ ನಿಗಧಿ ಪಡಿಸಿದ ವಾರ್ಡ್ ಸೌಲಭ್ಯಕ್ಕಿಂತ ಉನ್ನತ ದರ್ಜೆಯ ವಾರ್ಡ್ ಸೌಲಭ್ಯಗಳನ್ನು ಫಲಾನುಭವಿಯು ಆಯ್ಕೆ ಮಾಡಿಕೊಂಡಲ್ಲಿ.

ಮೇಲಿನ ಸಂದರ್ಭಗಳಲ್ಲಿ ಫಲಾನುಭವಿಯು ಹೆಚ್ಚುವರಿ ದರಗಳನ್ನು ಭರಿಸತಕ್ಕದ್ದು.

**ವಾರ್ಡ್ ಸೌಲಭ್ಯಗಳ ವಿವರ :** ವೇತನ ಶ್ರೇಣಿಗನುಗುಣವಾಗಿ ಸರ್ಕಾರಿ ನೌಕರರು ಈ ಕೆಳಕಂಡ ವಾರ್ಡ್‌ಗಳಲ್ಲಿ ಚಿಕಿತ್ಸೆ ಪಡೆಯಲು ಅರ್ಹರಾಗಿರುತ್ತಾರೆ.

| ಕ್ರಮ ಸಂಖ್ಯೆ | ವೇತನ ಶ್ರೇಣಿ | ಪಡೆಯಲರ್ಹವಾದ ವಾರ್ಡ್‌ಗಳ ದರ್ಜೆ/ ಸೌಲಭ್ಯಗಳು |
|---|---|---|
| 1 | ಮಾಸಿಕವಾಗಿ ರೂ. 16,000/- ರವರೆಗೆ | ಸಾಮಾನ್ಯ ವಾರ್ಡ್ |
| 2 | ಮಾಸಿಕವಾಗಿ ರೂ. 16,000/- ದಿಂದ ರೂ. 43,200/- | ಅರೆ-ಖಾಸಗೀ ವಾರ್ಡ್ |
| 3 | ರೂ. 43,201/- ಮತ್ತು ಮೇಲ್ಪಟ್ಟು | ಖಾಸಗೀ ವಾರ್ಡ್ |

**ಮಾಹಿತಿಗಾಗಿ ಯಾರನ್ನು ಸಂಪರ್ಕಿಸಬೇಕು**

- ಟೋಲ್ ಫ್ರೀ ಸಂಖ್ಯೆ: 1800 425 8330
- ಆರೋಗ್ಯ ಸಹಾಯವಾಣಿ 104,
- ವೆಬ್ ಸೈಟ್: www.sast.gov.in, www.arogya.karnataka.gov.in

ನೋಂದಾಯಿತ ಆಸ್ಪತ್ರೆಗಳ ಆರೋಗ್ಯ ಮಿತ್ರರು,

**2. ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ ಅಧಿಕಾರಿಗಳ ಮತ್ತು ನೌಕರರ ಅಧಿಕಾರ ಮತ್ತು ಕರ್ತವ್ಯಗಳು:**

| ಕ್ರ. ಸಂ | ಅಧಿಕಾರಿಗಳು ಮತ್ತು ನೌಕರರು | ಕರ್ತವ್ಯಗಳು |
|---|---|---|
| 1 | ಕಾರ್ಯಕಾರಿ ನಿರ್ದೇಶಕರು | ಟ್ರಸ್ಟ್ ಮಂಡಳಿಯ ಮತ್ತು ಕಾರ್ಯಕಾರಿ ಸಮಿತಿಯ ಕಾರ್ಯದರ್ಶಿಯಾಗಿ ಸಂಸ್ಥೆಯ ಸಂಪೂರ್ಣ ಆಡಳಿತ ಜವಾಬ್ದಾರಿಯು ಕಾರ್ಯಕಾರಿ ನಿರ್ದೇಶಕರದ್ದಾಗಿರುತ್ತದೆ. ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಯೋಜನೆಗಳ ಸಂಪೂರ್ಣ ಅನುಷ್ಠಾನ, ಇದಕ್ಕೆ ಪೂರಕವಾಗಿ ಕಾರ್ಯಕಾರಿ ಸಮಿತಿಗೆ ಸಲಹೆ ನೀಡಿ ಆದೇಶ ಪಡೆಯುವುದು, ಸರ್ಕಾರವು ಹೊರಡಿಸುವ ಆದೇಶಗಳ ಅನುಷ್ಠಾನ ಹಾಗು ಟ್ರಸ್ಟ್‌ನ ಇಡೀ ಆಡಳಿತ ವ್ಯವಸ್ಥೆಯ ಮುಖ್ಯಸ್ಥರಾಗಿ ಕಾರ್ಯಕಾರಿ ನಿರ್ದೇಶಕರು ಕರ್ತವ್ಯ ನಿರ್ವಹಿಸುವರು. |
| 2 | ನಿರ್ದೇಶಕರು (ಆಪರೇಷನ್ಸ್) | ಟ್ರಸ್ಟ್ ಸಂಸ್ಥೆಯ ಅನುಷ್ಠಾನಗೊಳಿಸುತ್ತಿರುವ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಎಲ್ಲಾ ಚಟುವಟಿಕೆ ಹಾಗು ಕಾರ್ಯಕ್ರಮಗಳ ಹೊಣೆಗಾರಿಕೆಯನ್ನು ಹೊಂದಿರುತ್ತಾರೆ.<br>ಆಡಳಿತ ಶಾಖೆಯ ಸಿಬ್ಬಂದಿ, ಐಇಸಿ, ಮಾಹಿತಿ ತಂತ್ರಜ್ಞಾನ, ಎಂ&ಇ, ವಿಧಾನ ಸಭೆ/ಪರಿಷತ್ತಿನ ಪ್ರಶ್ನೆ, ಕುಂದುಕೊರತೆ ವಿಭಾಗ, ಟ್ರಸ್ಟ್/ಕಾರ್ಯಕಾರಿ ಸಮಿತಿಯ ಸಭೆಗಳ ನಿರ್ವಹಣೆ, ಮಾಹಿತಿ ಹಕ್ಕು ಅಧಿನಿಯಮದ ಅರ್ಜಿಗಳ ನಿರ್ವಹಣೆ ಮತ್ತು ಕಾರ್ಯಕಾರಿ ನಿರ್ದೇಶಕರು ನೀಡುವ ವಿಷಯಗಳ ನಿರ್ವಹಣೆ. |
| 3 | ನಿರ್ದೇಶಕರು (ಎಂಎಂ) | ಮೆಡಿಕಲ್ ಮ್ಯಾನೇಜ್‌ಮೆಂಟ್ ವಿಭಾಗದ ಕರ್ತವ್ಯ ನಿರ್ವಹಣೆ ಮತ್ತು ಟ್ರಸ್ಟ್‌ನ ವಿವಿಧ ಯೋಜನೆಗಳ ಮೇಲ್ವಿಚಾರಣೆ ಮತ್ತು ಇಡಿಸಿ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಣೆ.<br>ನೆಟ್‌ವರ್ಕ್ ಆಸ್ಪತ್ರೆಗಳ ನೋಂದಣಿ ನಿರ್ವಹಣೆ, ಆರೋಗ್ಯ ಶಿಬಿರಗಳ ಏರ್ಪಡಿಸುವುದು, ಫಲಾನುಭವಿಗಳಿಗೆ ಉತ್ತಮ ಗುಣಮಟ್ಟದ ಚಿಕಿತ್ಸೆ ಒದಗಿಸುವ ನಿಟ್ಟಿನಲ್ಲಿ ನೆಟ್‌ವರ್ಕ್ ಆಸ್ಪತ್ರೆಗಳಿಗೆ ಮಾರ್ಗದರ್ಶನ ನೀಡುವುದು, ಪ್ರೀ-ಆಥ್ ಮತ್ತು ಕ್ಲೈಂಗಳ ಸಕಾಲಿಕ ಇತ್ಯರ್ಥ, ನೆಟ್‌ವರ್ಕ ಆಸ್ಪತ್ರೆಗಳ ಸಾಮರ್ಥ್ಯವನ್ನು ವೃದ್ಧಿಗೊಳಿಸಲು ಕ್ರಮ ವಹಿಸುವುದು. ಬೆನಿಫಿಟ್ ಪ್ಯಾಕೇಜ್‌ಗಳ ವಿನ್ಯಾಸ ಮತ್ತು ನಿರ್ವಹಣೆ, ಅನುಸರಣಾ ಚಿಕಿತ್ಸೆಯ ಬಗ್ಗೆ ಕ್ರಮವಹಿಸುವುದು ಮತ್ತು ಟ್ರಸ್ಟ್ ಮಂಡಳಿ ಹಾಗು ಕಾರ್ಯಕಾರಿ ನಿರ್ದೇಶಕರು ವಹಿಸುವ ಕರ್ತವ್ಯಗಳ ನಿರ್ವಹಣೆ. |
| 4 | ನಿರ್ದೇಶಕರು (ಹಣಕಾಸು) | ವಾರ್ಷಿಕ ಆಯ-ವ್ಯಯ, ಟ್ರಸ್ಟ್‌ನ ಲೆಕ್ಕ ಪತ್ರಗಳ ನಿರ್ವಹಣೆಯ ಮೇಲ್ವಿಚಾರಣೆ, ವಿಶ್ವ ಬ್ಯಾಂಕ್ ಕುರಿತ ಅಂಶಗಳ ನಿರ್ವಹಣೆ, ಟ್ರಸ್ಟ್‌ಗೆ ಸಂಬಂಧಿಸಿದ ಎಲ್ಲಾ ಯೋಜನೆಗಳ ಅನುದಾನ ಬಿಡುಗಡೆಯ ಮೇಲ್ವಿಚಾರಣೆ, ಹಣಕಾಸು ಶಾಖೆಯ ಸಿಬ್ಬಂದಿಯ ಮೇಲ್ವಿಚಾರಣೆ, ಲೆಕ್ಕ ಪತ್ರಗಳ ಸಮನ್ವಯ ನಿರ್ವಹಣೆಗಳ ಮೇಲ್ವಿಚಾರಣೆ ಮತ್ತು ಟ್ರಸ್ಟ್ ಮಂಡಳಿ ಹಾಗು ಕಾರ್ಯಕಾರಿ ನಿರ್ದೇಶಕರು ವಹಿಸುವ ಕರ್ತವ್ಯಗಳ ನಿರ್ವಹಣೆ. |

| | | |
|---|---|---|
| 5 | ಉಪ ನಿರ್ದೇಶಕರುಗಳು | ವಾಜಪೇಯಿ ಆರೋಗ್ಯಶ್ರೀ ಯೋಜನೆಗೆ ಸಂಬಂಧಿಸಿದಂತೆ ಕಾರ್ಯಕಾರಿ ನಿರ್ದೇಶಕರು ಹಾಗೂ ನಿರ್ದೇಶಕರು (ಎಂಎಂ) ರವರ ಸೂಚನೆಗಳಂತೆ ಮೆಡಿಕಲ್ ಮ್ಯಾನೇಜ್‌ಮೆಂಟ್ ವಿಭಾಗಕ್ಕೆ ಸಂಬಂಧಿಸಿದ ಕರ್ತವ್ಯಗಳನ್ನು ನಿರ್ವಹಿಸುವುದು. ನೆಟ್‌ವರ್ಕ್ ಆಸ್ಪತ್ರೆಗಳಿಂದ ಬರುವಂತಹ ಪ್ರೀ–ಆತ್ ಮತ್ತು ಕ್ಲೈಂ ಕಡತಗಳನ್ನು ನಿಯಮಾನುಸಾರ ಇತ್ಯರ್ಥ ಪಡಿಸುವುದು ಹಾಗು ಕಾರ್ಯಕಾರಿ ನಿರ್ದೇಶಕರು ವಹಿಸುವ ಕರ್ತವ್ಯಗಳನ್ನು ನಿರ್ವಹಿಸುವುದು. |
| 6 | ಸಮಾಲೋಚಕರು, ವೈದ್ಯರು | |
| 7 | ಪ್ರಾದೇಶಿಕ ಸಮಾಲೋಚಕರು, ಗುಲ್ಬರ್ಗಾ, ಬೆಳಗಾವಿ, ಬೆಂಗಳೂರು ಮತ್ತು ಮೈಸೂರು ವಿಭಾಗ | ರಾಜ್ಯದ ನಾಲ್ಕು ವಿಭಾಗಗಳಲ್ಲಿ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ, ಪ್ರಾದೇಶಿಕ ಸಮಾಲೋಚಕರು ಅವರವರ ವಿಭಾಗಗಳಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸುವ ಜವಾಬ್ದಾರಿ ಹೊಂದಿರುತ್ತಾರೆ. ನೆಟ್‌ವರ್ಕ್ ಆಸ್ಪತ್ರೆಗಳಿಗೆ ಭೇಟಿ ನೀಡಿ ಆಸ್ಪತ್ರೆಗಳು ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುತ್ತಿರುವ ಹಾಗು ಫಲಾನುಭವಿಗಳಿಗೆ ಗುಣಮಟ್ಟದ ಚಿಕಿತ್ಸೆ ಒದಗಿಸುತ್ತಿರುವ ಬಗ್ಗೆ ಪರಿಶೀಲಿಸುವುದು, ಅರ್ಹ ನೆಟ್‌ವರ್ಕ್ ಆಸ್ಪತ್ರೆಗಳ ನೋಂದಣಿ ಕಾರ್ಯನಿರ್ವಹಿಸುವುದು.<br>ಜಿಲ್ಲೆಗಳ ಜಿಲ್ಲಾಧಿಕಾರಿಗಳೊಡನೆ, ಜಿಲ್ಲಾ ಪಂಚಾಯತ್ ಮುಖ್ಯಾಧಿಕಾರಿಗಳೊಡನೆ ಹಾಗು ಆರೋಗ್ಯ ಇಲಾಖೆಯ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳೊಂದಿಗೆ ಸತತ ಸಂಪರ್ಕದಲ್ಲಿದ್ದುಕೊಂಡು ಹಾಗು ಸಿಬ್ಬಂದಿಗಳಾದ ವಿಭಾಗೀಯ/ಜಿಲ್ಲಾ ವ್ಯವಸ್ಥಾಪಕರು, ಆರೋಗ್ಯಮಿತ್ರರ ಮೇಲಾಧಿಕಾರಿಯಾಗಿ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದು. ನಿಗಧಿತ ದಿನಾಂಕಗಳಂದು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಆರೋಗ್ಯ ಶಿಬಿರಗಳನ್ನು ಏರ್ಪಡಿಸಿ ಅರ್ಹ ಫಲಾನುಭವಿಗಳನ್ನು ಗುರುತಿಸಿ ಸಕಾಲಕ್ಕೆ ಅವರುಗಳಿಗೆ ಚಿಕಿತ್ಸೆ ದೊರೆಯುವಂತೆ ಕರ್ತವ್ಯ ನಿರ್ವಹಿಸುವುದು ಹಾಗೂ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ ಕಾರ್ಯಕಾರಿ ನಿರ್ದೇಶಕರು ವಹಿಸುವ ಜವಾಬ್ದಾರಿಗಳನ್ನು ಅನುಷ್ಠಾನಗೊಳಿಸುವುದು. |
| 8 | ಯೋಜನಾ ವ್ಯವಸ್ಥಾಪಕರುಗಳು | ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ವತಿಯಂದ ಅನುಷ್ಠಾನಗೊಳ್ಳುವ ಯೋಜನಗಳನ್ನು ಆಯಾ ಯೋಜನೆಗಳಿಗೆ ಸಂಬಂಧಿಸಿದ ಕಾರ್ಯ ಚಟುವಟಿಕೆಗಳನ್ನು ಸಂಪೂರ್ಣವಾಗಿ ಯೋಜನಾ ವ್ಯವಸ್ಥಾಪಕರುಗಳು ಕರ್ತವ್ಯ ನಿರ್ವಹಿಸುವುದು ಮತ್ತು ಅನುಷ್ಠಾನಕ್ಕೆ ಜವಾಬ್ದಾರರಾಗಿರುತ್ತಾರೆ.<br>ನೆಟ್‌ವರ್ಕ್ ಆಸ್ಪತ್ರೆಗಳ ನೋಂದಣಿ ನಿರ್ವಹಣೆ, ಆರೋಗ್ಯ ಶಿಬಿರಗಳ ಏರ್ಪಡಿಸುವುದು, ಫಲಾನುಭವಿಗಳಿಗೆ ಉತ್ತಮ ಗುಣಮಟ್ಟದ ಚಿಕಿತ್ಸೆ ಒದಗಿಸುವ ನಿಟ್ಟಿನಲ್ಲಿ ನೆಟ್‌ವರ್ಕ್ ಆಸ್ಪತ್ರೆಗಳಿಗೆ ಮಾರ್ಗದರ್ಶನ ನೀಡುವುದು, ಪ್ರೀ–ಆತ್ ಮತ್ತು ಕ್ಲೈಂಗಳ ಸಕಾಲಿಕ ಇತ್ಯರ್ಥ, ನೆಟ್‌ವರ್ಕ ಆಸ್ಪತ್ರೆಗಳ ಸಾಮರ್ಥ್ಯವನ್ನು ವೃದ್ಧಿಗೊಳಿಸಲು ಕ್ರಮ ವಹಿಸುವುದು. ಬೆನಿಫಿಟ್ ಪ್ಯಾಕೇಜ್‌ಗಳ ವಿನ್ಯಾಸ ಮತ್ತು ನಿರ್ವಹಣೆ, ಅನುಸರಣಾ ಚಿಕಿತ್ಸೆಯ ಬಗ್ಗೆ ಕ್ರಮವಹಿಸುವುದು. ಕಾರ್ಯಕಾರಿ ನಿರ್ದೇಶಕರು ಮತ್ತು ನಿರ್ದೇಶಕರು (ಎಂಎಂ) ವಹಿಸುವ ಕರ್ತವ್ಯಗಳ ನಿರ್ವಹಣೆ. |
| 9 | ಸಮಾಲೋಚಕರು (ಐಇಸಿ) | ಮಾಹಿತಿ, ಶಿಕ್ಷಣ ಮತ್ತು ಸಂವಹನ ಶಾಖೆಯ ಸಮಾಲೋಚಕರಾಗಿ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ ಯೋಜನೆಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಪತ್ರಿಕಾ ಮಾಧ್ಯಮ, ವಿದ್ಯುನ್ಮಾನ ಮಾಧ್ಯಮ ಹಾಗು ಕ್ಷೇತ್ರ ಮಟ್ಟದ ಮಾಹಿತಿ, ಸಂವಹನ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸುವುದು. ಜಿಲ್ಲಾ ಮಟ್ಟದ/ತಾಲ್ಲೂಕು ಮಟ್ಟದ ಆರೋಗ್ಯ ಶಿಬಿರಗಳನ್ನು ನಿಯಮಿತವಾಗಿ ಏರ್ಪಡಿಸಿ ಆ ಬಗ್ಗೆ ಪ್ರಚಾರ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸುವುದು ಹಾಗು ಕಾರ್ಯಕಾರಿ ನಿರ್ದೇಶಕರು ವಹಿಸುವ ಕರ್ತವ್ಯಗಳನ್ನು ನಿರ್ವಹಿಸುವುದು. |
| 10 | ಯೋಜನಾ ವ್ಯವಸ್ಥಾಪಕರು (ಐಟಿ)/ | ಮಾಹಿತಿ ಮತ್ತು ತಂತ್ರಜ್ಞಾನ ಶಾಖೆಯ ಸಂಪೂರ್ಣ ತಾಂತ್ರಿಕ ನಿರ್ವಹಣೆ ಮತ್ತು ಮೇಲ್ವಿಚಾರಣೆ. ಈ ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸುವುದು ಮತ್ತು |

| | | |
|---|---|---|
| | ಸಮಾಲೋಚಕರು (ಐಟಿ) | ಈ ನಿಟ್ಟಿನಲ್ಲಿ ಸೇವೆ ಒದಗಿಸುವ ಐಟಿ ಸಲ್ಯೂಷನ್ಸ್ ಸಂಸ್ಥೆಯೊಂದಿಗೆ ಸಮಾಲೋಚಿಸಿ ಈ ಶಾಖೆಗೆ ಸಂಬಂಧಪಟ್ಟ ತಾಂತ್ರಿಕ ಅಂಶಗಳನ್ನು ನಿರ್ವಹಿಸುವುದು. ಟ್ರಸ್ಟ್ ಮಂಡಳಿಯ ಹಾಗೂ<br>ಯೋಜನೆಯ ಎಲ್ಲಾ ಮಾಹಿತಿಗಳನ್ನು, ಅಂಕಿ–ಅಂಶಗಳನ್ನು ತಂತ್ರಾಂಶದಲ್ಲಿ ಅಳವಡಿಸಿ ಕಾಲೋಚಿತಗೊಳಿಸುವುದು. ಈ ಯೋಜನೆಯ ಸಮಗ್ರ ಹಾಗೂ ಸಂಪೂರ್ಣ ಅನುಷ್ಠಾನದ ಉದ್ದೇಶಕ್ಕಾಗಿ ತಂತ್ರಾಂಶ ಸೌಲಭ್ಯವನ್ನು ಇ–ವ್ಯವಸ್ಥೆಯ ಆಧಾರದ ಮೇಲೆ ಅಭಿವೃದ್ಧಿ ಪಡಿಸುವುದು ಹಾಗೂ ಕಾರ್ಯಕಾರಿ ನಿರ್ದೇಶಕರು ವಹಿಸುವ ಕರ್ತವ್ಯಗಳನ್ನು ನಿರ್ವಹಿಸುವುದು. |
| 11 | ಸಮಾಲೋಚಕರು (ಎಂ,ವಿ&ಇ)/ ಸಹಾಯಕರು (ಎಂ & ಇ) | ಮೌಲ್ಯಮಾಪನ ಶಾಖೆಯಲ್ಲಿ ಯೋಜನೆಯ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಮೇಲ್ವಿಚಾರಣೆ ಮತ್ತು ಪರಿಶೀಲನಾ ಕರ್ತವ್ಯಗಳನ್ನು ನಿರ್ವಹಿಸುವುದು. ಯೋಜನೆಯ ಅನುಷ್ಠಾನದ ಎಲ್ಲಾ ಹಂತದ ಚಟುವಟಿಕೆಗಳ ಹಾಗು ಅವುಗಳ ಫಲಿತಾಂಶದ ಮೌಲ್ಯಮಾಪನವನ್ನು ಮಾಡುವುದು. ಎಲ್ಲ ವರದಿಗಳ, ಮಾಸಿಕ ಹಾಗು ವಾರ್ಷಿಕ ಪ್ರಗತಿಗಳ ಮತ್ತು ಅಂಕಿಅಂಶಗಳ ಮೌಲ್ಯಮಾಪನ ಹಾಗು ವಿಶ್ಲೇಷಣೆ ಮಾಡಿ ವರದಿ ನೀಡುವುದು ಹಾಗು ಕಾರ್ಯಕಾರಿ ನಿರ್ದೇಶಕರು ವಹಿಸುವ ಕರ್ತವ್ಯಗಳನ್ನು ನಿರ್ವಹಿಸುವುದು ಮತ್ತು ಸಹಾಯಕರು (ಎಂ &ಇ) ಇವರು ಸಮಾಲೋಚಕರಿಗೆ ಸಹಾಯಕರಾಗಿ ಕರ್ತವ್ಯ ನಿರ್ವಹಿಸುವುದು. |
| 12 | ವ್ಯದ್ಯರು (ಡೆತ್ ಆಡಿಟ್ ಸೆಲ್) | ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಸಂಸ್ಥೆಯ ವಿವಿಧ ಯೋಜನಗಳ ಫಲಾನುಭವಿಗಳು ಚಿಕಿತ್ಸೆ ಪಡೆದು/ಪಡೆಯುವ ಮುನ್ನ ಸಾವನ್ನಪ್ಪಿದಲ್ಲಿ ಅದರ ಕಾರಣವನ್ನು ಕಂಡು ಹಿಡಿಯುವುದು, ಸತ್ತ ವ್ಯಕ್ತಿಯ ಬಗ್ಗೆ ಆರೋಗ್ಯ ಮಾಹಿತಿ ಸಂಗ್ರಹಿಸುವ ಸಲುವಾಗಿ ಸಾವಿಗೆ ಮುನ್ನ ನಡೆದ ಘಟನೆಗಳ ವಿವರಣೆಯನ್ನು ಒಬ್ಬ ವ್ಯಕ್ತಿ ಅಥವಾ ಮೃತ ವ್ಯಕ್ತಿಗಳ ಪರಿಚಿತರಾಗಿರುವ ವ್ಯಕ್ತಿಯೊಂದಿಗೆ ನಡೆಸಿದ ಸಂಭಾಷಣೆಗಳನ್ನು ಆಧರಿಸಿ ಸಾವಿಗೆ ಒಂದು ಸಂಭವನೀಯ ಸಮರ್ಥನೆಯನ್ನು ರೂಪಿಸುವುದು ಮತ್ತು ಮೃತ ವ್ಯಕ್ತಿಯ ಆರೋಗ್ಯಕ್ಕೆ ಸಂಬಂಧಿಸಿದ ವೃತ್ತಿಪರ ವಿಶ್ಲೇಷಣೆ ನಡೆಸುವುದು. ನಿರ್ದೇಶಕರು (ಎಂಎಂ), ಎಲ್ಲಾ ಯೋಜನಾ ವ್ಯವಸ್ಥಾಪಕರುಗಳ ಸಹಯೋಗದೊಂದಿಗೆ ಮತ್ತು ಕಾರ್ಯಕಾರಿ ನಿರ್ದೇಶಕರು ವಹಿಸುವ ಕರ್ತವ್ಯಗಳ ನಿರ್ವಹಣೆ. |
| 13 | ಕಿಣಚಿಟುಣಥಿ ಸಮಾಲೋಚಕರು | ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಸಂಸ್ಥೆಯ ಯೋಜನೆಗಳ ಚಿಕಿತ್ಸೆಗಳಲ್ಲಿ ಹಾಗು ಅನುಸರಣಾ ಚಿಕಿತ್ಸೆಯ ಗುಣಮಟ್ಟಗಳ ಬಗ್ಗೆ ಪರಿಶೀಲನೆ, ವಿನ್ಯಾಸ, ಆರೋಗ್ಯ ಗುಣಮಟ್ಟದ ಸುಧಾರಣೆ ಮತ್ತು ಇತ್ಯಾದಿಗಳ ಬಗ್ಗೆ ಮೇಲ್ವಿಚಾರಣೆ ನಡೆಸುವುದು. ನಿರ್ದೇಶಕರು (ಎಂಎಂ), ನಿರ್ದೇಶಕರು (ಎಂಎಂ), ಎಲ್ಲಾ ಯೋಜನಾ ವ್ಯವಸ್ಥಾಪಕರುಗಳ ಸಹಯೋಗದೊಂದಿಗೆ ಮತ್ತು ಕಾರ್ಯಕಾರಿ ನಿರ್ದೇಶಕರು ವಹಿಸುವ ಕರ್ತವ್ಯಗಳ ನಿರ್ವಹಣೆ. |
| 14 | ವ್ಯವಸ್ಥಾಪಕರು (ಕ್ಯಾಪಾಸಿಟಿ ಬಿಲ್ಡಿಂಗ್) | ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಸಂಸ್ಥೆಯ ಅಧಿಕಾರಿಗಳು/ಸಿಬ್ಬಂದಿಗಳು, ನೋಂದಾಯಿತ ಆಸ್ಪತ್ರೆಯ ಸಂಬಂಧಿಸಿದ ನೌಕರರಿಗೆ ಹಾಗೂ ಟ್ರಸ್ಟಿಗೆ ಸೇವೆ ಒದಗಿಸುವ ಸಂಸ್ಥೆಯ ಸಿಬ್ಬಂದಿಗಳಿಗೆ ಯೋಜನೆಯ ಬಗ್ಗೆ ಮಾಹಿತಿ, ತರಬೇತಿ ಮತ್ತು ಮಾರ್ಗದರ್ಶನ ನೀಡಿವುದು. ಟ್ರಸ್ಟ್ ಅಧಿಕಾರಿ/ಸಿಬ್ಬಂದಿಗಳನ್ನು ವಿಶ್ವ ಬ್ಯಾಂಕ್ ಹಾಗೂ ವಿವಿಧ ಸಂಸ್ಥೆಗಳಿಂದ ಏರ್ಪಡಿಸುವ ಕಾರ್ಯಾಗಾರ ಮತ್ತು ತರಬೇತಿ ಕಾರ್ಯಕ್ರಮಗಳಿಗೆ ನಿಯೋಜಿಸುವ ಕಾರ್ಯಗಳನ್ನು ನಿರ್ವಹಿಸುವುದು. |
| 15 | ಸಂಯೋಜಕರು (ಬೆನಿಫಿಟ್ ಪ್ಯಾಕೇಜ್) | ಯೋಜನೆಯಲ್ಲಿ ಅಳವಡಿಸಿಕೊಂಡಿರುವ ವಿವಿಧ ಬೆನಿಫಿಟ್ ಪ್ಯಾಕೇಜ್ ದರಗಳ ಬಗ್ಗೆ ಹಾಗು ನೆಟ್‌ವರ್ಕ್ ಆಸ್ಪತ್ರೆಗಳು ಒದಗಿಸುವ ವೈದ್ಯಕೀಯ ಚಿಕಿತ್ಸೆಯ ಬಗ್ಗೆ ಪರಿಶೀಲನೆ, ಇತರೆ ಯೋಜನೆಗಳಲ್ಲಿ ಜಾರಿಯಲ್ಲಿರುವ ಬೆನಿಫಿಟ್ ಪ್ಯಾಕೇಜ್ ದರಗಳ ಅಧ್ಯಯನ ಹಾಗು ಉತ್ತಮ ಗುಣಮಟ್ಟದ ಚಿಕಿತ್ಸೆಯನ್ನು ಫಲಾನುಭವಿಗಳಿಗೆ ಆಸ್ಪತ್ರೆಗಳು ಒದಗಿಸುವ ನಿಟ್ಟಿನಲ್ಲಿ ಪರಿಶೀಲಿಸಿ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ |

| | | |
|---|---|---|
| | | ಯೋಜನೆಯ ಸೌಲಭ್ಯಗಳನ್ನು ಉತ್ತಮ ಪಡಿಸಲು ಕಾರ್ಯಕಾರಿ ನಿರ್ದೇಶಕರಿಗೆ ವರದಿ ಮತ್ತು ಸಲಹೆ ನೀಡುವುದು. ನೆಟ್‌ವರ್ಕ್ ಆಸ್ಪತ್ರೆಗಳು ಎನ್‌ಎಬಿಹೆಚ್ ಮಾನ್ಯತೆ ಪಡೆಯಲು ಪೂರಕವಾಗುವಂತೆ ಕ್ರಮವಹಿಸುವುದು ಹಾಗೂ ನಿರ್ದೇಶಕರು (ಎಂಎಂ), ಎಲ್ಲಾ ಯೋಜನಾ ವ್ಯವಸ್ಥಾಪಕರುಗಳ ಸಹಯೋಗದೊಂದಿಗೆ ಮತ್ತು ಕಾರ್ಯಕಾರಿ ನಿರ್ದೇಶಕರು ವಹಿಸುವ ಕರ್ತವ್ಯಗಳ ನಿರ್ವಹಣೆ. |
| 16 | ಸಂಯೋಜಕರು (ಎಸ್‌ಟಿಪಿ) | ಯೋಜನೆಯಲ್ಲಿ ಜಾರಿಯಲ್ಲಿರುವ ಚಿಕಿತ್ಸೆಗಳಲ್ಲಿ ಹಾಗು ಅನುಸರಣಾ ಚಿಕಿತ್ಸೆಗಳಲ್ಲಿ ಅಳವಡಿಸಿಕೊಳ್ಳಬಹುದಾದ ಪ್ರಮಾಣಿಕೃತ ಚಿಕಿತ್ಸಾ ವಿಧಾನಗಳನ್ನು ಅಧ್ಯಯನ ಮಾಡಿ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ ಯೋಜನೆಗಳಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ರೂಪು–ರೇಷೆ/ಮಾರ್ಗ ಸೂಚಿಗಳನ್ನು, ಯೋಜನೆಯಡಿಯಲ್ಲಿ ಸೇವೆ ಒದಗಿಸುತ್ತಿರುವ ನೆಟ್‌ವರ್ಕ್ ಆಸ್ಪತ್ರೆಗಳಿಗೆ ಈ ಬಗ್ಗೆ ಮಾರ್ಗಸೂಚಿಗಳನ್ನು ಸಿದ್ಧಪಡಿಸುವುದು ಹಾಗು ಜಾರಿಗೆ ತರುವ ಬಗ್ಗೆ ಕಾರ್ಯಕಾರಿ ನಿರ್ದೇಶಕರ ಸೂಚನೆಯಂತೆ ಕ್ರಮವಹಿಸುವುದು ಮತ್ತು ನಿರ್ದೇಶಕರು (ಎಂಎಂ), ಎಲ್ಲಾ ಯೋಜನಾ ವ್ಯವಸ್ಥಾಪಕರುಗಳ ಸಹಯೋಗದೊಂದಿಗೆ ಮತ್ತು ಕಾರ್ಯಕಾರಿ ನಿರ್ದೇಶಕರು ವಹಿಸುವ ಕರ್ತವ್ಯಗಳ ನಿರ್ವಹಣೆ. |
| 17 | ಸಂಯೋಜಕರು (Quality Assurance) | ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಸಂಸ್ಥೆಯ ಯೋಜನೆಗಳ ಚಿಕಿತ್ಸೆಗಳಲ್ಲಿ ಹಾಗು ಅನುಸರಣಾ ಚಿಕಿತ್ಸೆಯ ಗುಣಮಟ್ಟಗಳ ಬಗ್ಗೆ ಪರಿಶೀಲನೆ, ವಿನ್ಯಾಸ, ಆರೋಗ್ಯ ಗುಣಮಟ್ಟದ ಸುಧಾರಣೆ ಮತ್ತು ಇತ್ಯಾದಿಗಳ ಬಗ್ಗೆ ಕರ್ತವ್ಯ ನಿರ್ವಹಿಸುವುದು. ನಿರ್ದೇಶಕರು (ಎಂಎಂ), ನಿರ್ದೇಶಕರು (ಆಪರೇಷನ್ಸ್), ಎಲ್ಲಾ ಯೋಜನಾ ವ್ಯವಸ್ಥಾಪಕರುಗಳ ಸಹಯೋಗದೊಂದಿಗೆ ಮತ್ತು ಕಾರ್ಯಕಾರಿ ನಿರ್ದೇಶಕರು ವಹಿಸುವ ಕರ್ತವ್ಯಗಳ ನಿರ್ವಹಣೆ. |
| 18 | ಸಂಯೋಜಕರು (Network Hospital) | ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಸಂಸ್ಥೆಯೊಂದಿಗೆ ನೆಟ್‌ವರ್ಕ್ ಆಸ್ಪತ್ರೆಗಳ ನೋಂದಣಿ ನಿರ್ವಹಣೆ, ಫಲಾನುಭವಿಗಳಿಗೆ ಉತ್ತಮ ಗುಣಮಟ್ಟದ ಚಿಕಿತ್ಸೆ ಒದಗಿಸುವ ನಿಟ್ಟಿನಲ್ಲಿ ನೆಟ್‌ವರ್ಕ್ ಆಸ್ಪತ್ರೆಗಳಿಗೆ ಮಾರ್ಗದರ್ಶನ ನೀಡುವುದು, ಪ್ರೀ–ಆತ್ ಮತ್ತು ಕ್ಲೈಂಗಳ ಸಕಾಲಿಕ ಇತ್ಯರ್ಥ, ನೆಟ್‌ವರ್ಕ ಆಸ್ಪತ್ರೆಗಳ ಸಾಮರ್ಥ್ಯವನ್ನು ವೃದ್ಧಿಗೊಳಿಸಲು ಕ್ರಮ ವಹಿಸುವುದು. ನಿರ್ದೇಶಕರು (ಎಂಎಂ), ಎಲ್ಲಾ ಯೋಜನಾ ವ್ಯವಸ್ಥಾಪಕರುಗಳ ಸಹಯೋಗದೊಂದಿಗೆ ಮತ್ತು ಕಾರ್ಯಕಾರಿ ನಿರ್ದೇಶಕರು ವಹಿಸುವ ಕರ್ತವ್ಯಗಳ ನಿರ್ವಹಣೆ. |
| 19 | ಸಂಯೋಜಕರು (ಕುಂದುಕೊರತೆ) | ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ/ಫಲಾನುಭವಿಗಳಿಂದ/ಸೇವಾ ಸಂಸ್ಥೆಗಳಿಂದ ಬರುವ ಕುಂದು ಕೊರತೆಗಳ ದೂರುಗಳನ್ನು ಸ್ವೀಕರಿಸಿ, ವಿಚಾರಣೆ ಮಾಡುವ ಬಗ್ಗೆ ವ್ಯವಸ್ಥೆ ಮಾಡಿ, ಅವುಗಳ ಬಗ್ಗೆ ಕುಲಂಕೂಷವಾದ ವರದಿಯನ್ನು ಕಾರ್ಯಕಾರಿ ನಿರ್ದೇಶಕರಿಗೆ ಮಂಡಿಸಿ ದೂರುಗಳನ್ನು ಇತ್ಯರ್ಥಗೊಳಿಸುವ ಬಗ್ಗೆ ಕ್ರಮಕೈಗೊಳ್ಳುವುದು ಮತ್ತು ಟ್ರಸ್ಟ್‌ನಲ್ಲಿ ಪ್ರಾರಂಭಿಸುವ ಕಾಲ್ ಸೆಂಟರ್‌ನ ಮತ್ತು ಅದರ ಸಿಬ್ಬಂದಿಗಳ ಕರ್ತವ್ಯದ ಮೇಲ್ವಿಚಾರಣೆ ನಡೆಸುವುದು. ನಿರ್ದೇಶಕರು (ಎಂಎಂ), ಎಲ್ಲಾ ಯೋಜನಾ ವ್ಯವಸ್ಥಾಪಕರುಗಳ ಸಹಯೋಗದೊಂದಿಗೆ ಮತ್ತು ಕಾರ್ಯಕಾರಿ ನಿರ್ದೇಶಕರು ವಹಿಸುವ ಕರ್ತವ್ಯಗಳ ನಿರ್ವಹಣೆ. |
| 20 | ಸಹಾಯಕ ನಿರ್ದೇಶಕರು (ಹಣಕಾಸು) | ವಾರ್ಷಿಕ ಆಯ–ವ್ಯಯವನ್ನು ಸಿದ್ಧಪಡಿಸುವುದು, ಟ್ರಸ್ಟ್‌ನ ಎಲ್ಲಾ ಲೆಕ್ಕ ಪತ್ರಗಳ ನಿರ್ವಹಣೆಯ ಮೇಲ್ವಿಚಾರಣೆ, ಟ್ರಸ್ಟಗೆ ಸಂಬಂಧಿಸಿದ ಎಲ್ಲಾ ಯೋಜನೆಗಳ ಅನುದಾನ ಬಿಡುಗಡೆಯ ಮೇಲ್ವಿಚಾರಣೆ, ವಿಶ್ವ ಬ್ಯಾಂಕ್ ಕುರಿತ ಅಂಶಗಳ ನಿರ್ವಹಣೆ, |
| 21 | ವೈದ್ಯರು | ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ ಫಲಾನುಭವಿಗಳ ಚಿಕಿತ್ಸೆಗೆ ಸಂಬಂಧಿಸಿದ ಆಸ್ಪತ್ರೆಯಿಂದ ಸ್ವೀಕೃತವಾಗುವ ಪ್ರೀ–ಆತ್ ಮತ್ತು ಕ್ಲೈಂಗಳನ್ನು ಆನ್–ಲೈನ್ |

| | | |
|---|---|---|
| | | ಮೂಲಕ ಕಛೇರಿಯಿಂದ ಸಕಾಲಿಕವಾಗಿ ಇತ್ಯರ್ಥಗೊಳಿಸುವುದು. ನಿರ್ದೇಶಕರು (ಎಂಎಂ), ಎಲ್ಲಾ ಯೋಜನಾ ವ್ಯವಸ್ಥಾಪಕರುಗಳ ಸಹಯೋಗದೊಂದಿಗೆ ಮತ್ತು ಕಾರ್ಯಕಾರಿ ನಿರ್ದೇಶಕರು ವಹಿಸುವ ಕರ್ತವ್ಯಗಳ ನಿರ್ವಹಣೆ. |
| 22 | ವೈದ್ಯರ ಪಟ್ಟಿ (Panel of Doctors) | ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ ಫಲಾನುಭವಿಗಳ ಚಿಕಿತ್ಸೆಗೆ ಸಂಬಂಧಿಸಿದ ಆಸ್ಪತ್ರೆಯಿಂದ ಸ್ವೀಕೃತವಾಗುವ ಪ್ರೀ–ಆತ್ ಮತ್ತು ಕ್ಲೈಂಗಳನ್ನು ಆನ್–ಲೈನ್ ಮೂಲಕ ಇರುವ ಸ್ಥಳದಿಂದಲೇ ಸಕಾಲಿಕವಾಗಿ ಇತ್ಯರ್ಥಗೊಳಿಸುವುದು. ನಿರ್ದೇಶಕರು (ಎಂಎಂ), ಎಲ್ಲಾ ಯೋಜನಾ ವ್ಯವಸ್ಥಾಪಕರುಗಳ ಸಹಯೋಗದೊಂದಿಗೆ ಮತ್ತು ಕಾರ್ಯಕಾರಿ ನಿರ್ದೇಶಕರು ವಹಿಸುವ ಕರ್ತವ್ಯಗಳ ನಿರ್ವಹಣೆ. |
| 23 | Intern | ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ ಫಲಾನುಭವಿಗಳ ಚಿಕಿತ್ಸೆಗೆ ಸಂಬಂಧಿಸಿದ ಆಸ್ಪತ್ರೆಯಿಂದ ಸ್ವೀಕೃತವಾಗುವ ಪ್ರೀ–ಆತ್ ಮತ್ತು ಕ್ಲೈಂಗಳನ್ನು ಆನ್–ಲೈನ್ ಮೂಲಕ ಸಕಾಲಿಕವಾಗಿ ಇತ್ಯರ್ಥಗೊಳಿಸುವುದು. ನಿರ್ದೇಶಕರು (ಎಂಎಂ), ಎಲ್ಲಾ ಯೋಜನಾ ವ್ಯವಸ್ಥಾಪಕರುಗಳ ಸಹಯೋಗದೊಂದಿಗೆ ಮತ್ತು ಕಾರ್ಯಕಾರಿ ನಿರ್ದೇಶಕರು ವಹಿಸುವ ಕರ್ತವ್ಯಗಳ ನಿರ್ವಹಣೆ. |
| 24 | ಲೆಕ್ಕ ವ್ಯವಸ್ಥಾಪಕರು | ಟ್ರಸ್ಟ್‌ಗೆ ಸಂಬಂಧಿಸಿದ ಸಂಪೂರ್ಣ ಲೆಕ್ಕ ಪತ್ರಗಳ ಹಾಗು ನಿಗಧಿತ ದಾಖಲಾತಿಗಳ ನಿರ್ವಹಣೆ, ಆಡಿಟ್ ನಿರ್ವಹಣೆ, ಅಯ–ವ್ಯಯ ನಿರ್ವಹಣೆ, ನೆಟ್‌ವರ್ಕ್ ಆಸ್ಪತ್ರೆಗಳು ಹಾಗು ಇತರೆ ಸಂಸ್ಥೆಗಳಿಗೆ ಹಣ ಪಾವತಿಯ ನಿರ್ವಹಣೆ, ಮಾಸಿಕ/ತ್ರೈಮಾಸಿಕ/ ವಾರ್ಷಿಕ ಲೆಕ್ಕ ದಾಖಲಾತಿಗಳ ನಿರ್ವಹಣೆ, ನೆಟ್‌ವರ್ಕ್ ಆಸ್ಪತ್ರೆಗಳ ಕ್ಲೈಂಸ್‌ಗಳನ್ನು ಇತ್ಯರ್ಥ ಪಡಿಸಲು ಸಹಾಯಕ ನಿರ್ದೇಶಕರು (ಹಣಕಾಸು) ಇವರಿಗೆ ಸಹಾಯ ಮಾಡುವುದು ಮತ್ತು ಕಾರ್ಯಕಾರಿ ನಿರ್ದೇಶಕರು, ನಿರ್ದೇಶಕರು (ಹಣಕಾಸು) ಮತ್ತು ಸಹಾಯಕ ನಿರ್ದೇಶಕರು (ಹಣಕಾಸು) ಇವರುಗಳು ವಹಿಸುವ ಕರ್ತವ್ಯಗಳನ್ನು ನಿರ್ವಹಿಸುವುದು. |
| 25 | ಕ್ಲೈಂಸ್ ವ್ಯವಸ್ಥಾಪಕರು–1 ರಿಂದ 7 | ನೆಟ್‌ವರ್ಕ್ ಆಸ್ಪತ್ರೆಗಳು ಸಲ್ಲಿಸುವ ಕ್ಲೈಂ ಪ್ರಕರಣಗಳ ನಿಯಮಾನುಸಾರ ಪರಿಶೀಲನೆ, ಲೆಕ್ಕ ದಾಖಲಾತಿಗಳ ನಿರ್ವಹಣೆ, ಲೆಕ್ಕ ತಪಾಸಣೆಗೆ ಸಂಬಂಧಿಸಿದ ಕರ್ತವ್ಯ ನಿರ್ವಹಣೆ, ವರದಿಗಳ ನಿರ್ವಹಣೆ ಹಾಗು ಕಾರ್ಯಕಾರಿ ನಿರ್ದೇಶಕರು ಮತ್ತು ನಿರ್ದೇಶಕರು (ಹಣಕಾಸು) ಮತ್ತು ಸಹಾಯಕ ನಿರ್ದೇಶಕರು (ಹಣಕಾಸು) ಇವರುಗಳು ವಹಿಸುವ ಕರ್ತವ್ಯಗಳನ್ನು ನಿರ್ವಹಿಸುವುದು. |
| 26 | ಕಾರ್ಯಕಾರಿ ಸಹಾಯಕರು (ಐಟಿ) | ಮಾಹಿತಿ ತಂತ್ರಜ್ಞಾನ ಶಾಖೆಯ ಕಾರ್ಯಕಾರಿ ಸಹಾಯಕರು ಯೋಜನೆಗೆ ಸಂಬಂಧಿಸಿದಂತೆ ಕರ್ತವ್ಯಗಳನ್ನು ನಿರ್ವಹಿಸುವುದು. ಕ್ರಮ ಸಂಖ್ಯೆ 15 ರಲ್ಲಿ ಕಾಣಿಸಿರುವ ಮಾಹಿತಿ ತಂತ್ರಜ್ಞಾನ ಸಮಾಲೋಚಕರ ಸಹಾಯಕರಾಗಿ ಈ ಶಾಖೆಗೆ ಸಂಬಂಧಿಸಿದ ಕರ್ತವ್ಯಗಳನ್ನು ನಿರ್ವಹಿಸುವುದು ಮತ್ತು ಕಾರ್ಯಕಾರಿ ನಿರ್ದೇಶಕರು ವಹಿಸುವ ಕರ್ತವ್ಯಗಳನ್ನು ನಿರ್ವಹಿಸುವುದು |
| 27 | ಕಾರ್ಯಕಾರಿ ಸಹಾಯಕರು | ಯೋಜನಾ ವ್ಯವಸ್ಥಾಪಕರುಗಳ ವಿಭಾಗಕ್ಕೆ ಸಂಬಂಧಿಸಿದಂತೆ ದಿನನಿತ್ಯದ ಕೆಲಸಗಳನ್ನು ನಿರ್ವಹಿಸುವುದು, ಈ ವಿಭಾಗದ ಕಡತಗಳ ನಿರ್ವಹಣೆ, ವಿವಿಧ ಸಭೆಗಳ ಕಾರ್ಯಸೂಚಿಗಳನ್ನು ಮತ್ತು ಸಭಾ ನಡವಳಿಗಳನ್ನು ಸಿದ್ಧಪಡಿಸುವುದು, ಆಯಾ ಶಾಖೆಯ ತೀರ್ಮಾನಗಳನ್ನು ನೆಟ್‌ವರ್ಕ್ ಆಸ್ಪತ್ರೆಗಳು ಮತ್ತು ಯೋಜನೆಗೆ |
| 28 | ಜಿಲ್ಲಾ ಸಂಯೋಜಕರುಗಳು | ರಾಜ್ಯದ ಮೂವತ್ತು ಜಿಲ್ಲೆಗಳಿಗೆ ಪ್ರತಿ ಜಿಲ್ಲೆಗೆ ಒಬ್ಬ ಜಿಲ್ಲಾ ಸಂಯೋಜಕರನ್ನು ನೇಮಿಸಿದ್ದು, ಸದರಿಯವರು ಜಿಲ್ಲೆಗಳಲ್ಲಿ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ ಯೋಜನೆಗಳ ಮೇಲ್ವಿಚಾರಣೆ ಮತ್ತು ನೆಟ್‌ವರ್ಕ್ ಆಸ್ಪತ್ರೆಗಳ ಸಹಯೋಗದೊಂದಿಗೆ ಯೋಜನಗಳನ್ನು ಕಾರ್ಯ ರೂಪ ತರುವುದು ಹಾಗೂ ಆಸ್ಪತ್ರೆಗಳಲ್ಲಿನ ಆರೋಗ್ಯಮಿತ್ರರ ಕರ್ತವ್ಯ ನಿರ್ವಹಣೆ ಬಗ್ಗೆ ಮೇಲ್ವಿಚಾರಣೆ ನಡೆಸುವುದು ಮತ್ತು ಕಾರ್ಯಕಾರಿ ನಿರ್ದೇಶಕರು ಹಾಗೂ ಟ್ರಸ್ಟ್ ಅಧಿಕಾರಿಗಳು ವಹಿಸುವ ಕರ್ತವ್ಯಗಳನ್ನು ನಿರ್ವಹಿಸುವುದು. |
| | | |

| | | |
|---|---|---|
| **ಹೊರಗುತ್ತಿಗೆ ಆಧಾರಿತ ಸಿಬ್ಬಂದಿಗಳ ವಿವರ** | | |
| 29 | ಕಛೇರಿ ಅಧೀಕ್ಷಕರು | ಟ್ರಸ್ಟ್ ಸಂಸ್ಥೆಯ ಆಡಳಿತ ವಿಭಾಗಕ್ಕೆ ಸಂಬಂಧಿಸಿದ ಕಡತಗಳ ನಿರ್ವಹಣೆ, ಕಛೇರಿ ನಿರ್ವಹಣೆ ಹಾಗು ನಿರ್ದೇಶಕರು (ಆಪರೇಷನ್ಸ್) ಹಾಗು ಕಾರ್ಯಕಾರಿ ನಿರ್ದೇಶಕರು ವಹಿಸುವ ಕರ್ತವ್ಯಗಳನ್ನು ನಿರ್ವಹಿಸುವುದು. |
| 30 | ಆಪ್ತ ಸಹಾಯಕರು – ಕಾರ್ಯಕಾರಿ ನಿರ್ದೇಶಕರ ವಿಭಾಗ | ಕಾರ್ಯಕಾರಿ ನಿರ್ದೇಶಕರು ಇವರ ಆಪ್ತ ಶಾಖೆಗೆ ವಿಭಾಗಕ್ಕೆ ಸಂಬಂಧಿಸಿದಂತೆ ದಿನನಿತ್ಯದ ಕೆಲಸಗಳನ್ನು ನಿರ್ವಹಿಸುವುದು, ಈ ವಿಭಾಗದ ಕಡತಗಳ ನಿರ್ವಹಣೆ, ಕಾರ್ಯಕಾರಿ ನಿರ್ದೇಶಕರ ತೀರ್ಮಾನಗಳನ್ನು ಐಎಸ್ಎ, ನೆಟ್‌ವರ್ಕ್ ಆಸ್ಪತ್ರೆಗಳು ಮತ್ತು ಯೋಜನೆಗೆ ಸಂಬಂಧಿಸಿದ ಅಧಿಕಾರಿಗಳಿಗೆ ಸಕಾಲದಲ್ಲಿ ತಿಳಿಸುವುದು ಹಾಗು ಸಭೆಗಳಿಗೆ ಪಿಪಿಟಿ ಸಿದ್ಧಪಡಿಸುವುದು ಹಾಗು ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದ ಎಲ್ಲಾ ಅಧಿಕಾರಿಗಳು ಹಾಗು ಪ್ರಾಧಿಕಾರಗಳೊಂದಿಗೆ ಸಮನ್ವಯಿಸಿಕೊಂಡು ಕರ್ತವ್ಯ ನಿರ್ವಹಣೆ ಮತ್ತು ಕಾರ್ಯಕಾರಿ ನಿರ್ದೇಶಕರು ವಹಿಸುವ ಕರ್ತವ್ಯಗಳ ನಿರ್ವಹಣೆ. |
| 31 | ಆಪ್ತ ಸಹಾಯಕರು – ನಿರ್ದೇಶಕರು (ಆಪರೇಷನ್ಸ್) ವಿಭಾಗ | ನಿರ್ದೇಶಕರು (ಆಪರೇಷನ್ಸ್) ಇವರ ಆಪ್ತ ಶಾಖೆಗೆ ವಿಭಾಗಕ್ಕೆ ಸಂಬಂಧಿಸಿದಂತೆ ದಿನನಿತ್ಯದ ಕೆಲಸಗಳನ್ನು ನಿರ್ವಹಿಸುವುದು, ಈ ವಿಭಾಗದ ಕಡತಗಳ ನಿರ್ವಹಣೆ, ಉಪನಿರ್ದೇಶಕರ ತೀರ್ಮಾನಗಳನ್ನು ಐಎಸ್ಎ, ನೆಟ್‌ವರ್ಕ್ ಆಸ್ಪತ್ರೆಗಳು ಮತ್ತು ಯೋಜನೆಗೆ ಸಂಬಂಧಿಸಿದ ಅಧಿಕಾರಿಗಳಿಗೆ ಸಕಾಲದಲ್ಲಿ ತಿಳಿಸುವುದು ಹಾಗು ಸಭೆಗಳಿಗೆ ಪಿಪಿಟಿ ಸಿದ್ಧಪಡಿಸುವುದು ಹಾಗು ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದ ಎಲ್ಲಾ ಅಧಿಕಾರಿಗಳು ಹಾಗು ಪ್ರಾಧಿಕಾರಗಳೊಂದಿಗೆ ಸಮನ್ವಯಿಸಿಕೊಂಡು ಕರ್ತವ್ಯ ನಿರ್ವಹಣೆ ಮತ್ತು ಉಪನಿರ್ದೇಶಕರು (ಆಪರೇಷನ್ಸ್) ವಹಿಸುವ ಕರ್ತವ್ಯಗಳ ನಿರ್ವಹಣೆ. |
| 32 | ಆಪ್ತ ಸಹಾಯಕರು – ನಿರ್ದೇಶಕರು (ಹಣಕಾಸು) ವಿಭಾಗ | ನಿರ್ದೇಶಕರು (ಹಣಕಾಸು) ಇವರ ವಿಭಾಗಕ್ಕೆ ಸಂಬಂಧಿಸಿದಂತೆ ದಿನನಿತ್ಯದ ಕೆಲಸಗಳನ್ನು ನಿರ್ವಹಿಸುವುದು, ಈ ವಿಭಾಗದ ಕಡತಗಳ ನಿರ್ವಹಣೆ, ಹಣಕಾಸು ಶಾಖೆಯ ತೀರ್ಮಾನಗಳನ್ನು ಐಎಸ್ಎ, ನೆಟ್‌ವರ್ಕ್ ಆಸ್ಪತ್ರೆಗಳು ಮತ್ತು ಯೋಜನೆಗೆ ಸಂಬಂಧಿಸಿದ ಅಧಿಕಾರಿಗಳಿಗೆ ಸಕಾಲದಲ್ಲಿ ತಿಳಿಸುವುದು ಹಾಗು ಸಭೆಗಳಿಗೆ ಪಿಪಿಟಿ ಸಿದ್ಧಪಡಿಸುವುದು ಹಾಗು ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದ ಎಲ್ಲಾ ಅಧಿಕಾರಿಗಳು ಹಾಗು ಪ್ರಾಧಿಕಾರಗಳೊಂದಿಗೆ ಸಮನ್ವಯಿಸಿಕೊಂಡು ಕರ್ತವ್ಯ ನಿರ್ವಹಣೆ ಮತ್ತು ನಿರ್ದೇಶಕರು (ಹಣಕಾಸು) ಹಾಗು ಕಾರ್ಯಕಾರಿ ನಿರ್ದೇಶಕರು ವಹಿಸುವ ಕರ್ತವ್ಯಗಳ ನಿರ್ವಹಣೆ. |
| 33 | ಆಪ್ತ ಸಹಾಯಕರು – ನಿರ್ದೇಶಕರು (ಎಮ್.ಎಮ್) ವಿಭಾಗ | ನಿರ್ದೇಶಕರು (ಎಂಎಂ) ಇವರ ವಿಭಾಗಕ್ಕೆ ಸಂಬಂಧಿಸಿದಂತೆ ದಿನನಿತ್ಯದ ಕೆಲಸಗಳನ್ನು ನಿರ್ವಹಿಸುವುದು, ಈ ವಿಭಾಗದ ಕಡತಗಳ ನಿರ್ವಹಣೆ, ಈ ಶಾಖೆಯ ತೀರ್ಮಾನಗಳನ್ನು ಐಎಸ್ಎ, ನೆಟ್‌ವರ್ಕ್ ಆಸ್ಪತ್ರೆಗಳು ಮತ್ತು ಯೋಜನೆಗೆ ಸಂಬಂಧಿಸಿದ ಅಧಿಕಾರಿಗಳಿಗೆ ಸಕಾಲದಲ್ಲಿ ತಿಳಿಸುವುದು ಹಾಗು ಸಭೆಗಳಿಗೆ ಪಿಪಿಟಿ ಸಿದ್ಧಪಡಿಸುವುದು ಹಾಗು ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದ ಎಲ್ಲಾ ಅಧಿಕಾರಿಗಳು, ವೈದ್ಯರು, ನೆಟ್‌ವರ್ಕ್ ಆಸ್ಪತ್ರೆಗಳೊಂದಿಗೆ ಸಮನ್ವಯಿಸಿಕೊಂಡು ಕರ್ತವ್ಯ ನಿರ್ವಹಣೆ ಮತ್ತು ನಿರ್ದೇಶಕರು (ಎಂಎಂ) ಹಾಗು ಕಾರ್ಯಕಾರಿ ನಿರ್ದೇಶಕರು ವಹಿಸುವ ಕರ್ತವ್ಯಗಳ ನಿರ್ವಹಣೆ. |
| 34 | ಹಿರಿಯ ಸಹಾಯಕರು (ಆಡಳಿತ) | ಆಡಳಿತ ಶಾಖೆಗೆ ಸಂಬಂಧಿಸಿ ಕಡತಗಳ ನಿರ್ವಹಣೆ ಮತ್ತು ಉಪ ನಿರ್ದೇಶಕರು (ಆಪರೇಷನ್ಸ್) ಮತ್ತು ಕಾರ್ಯಕಾರಿ ನಿರ್ದೇಶಕರು ವಹಿಸುವ ಕರ್ತವ್ಯಗಳನ್ನು ನಿರ್ವಹಿಸುವುದು. |
| 35 | ಸಹಾಯಕರುಗಳು | ನಿರ್ದೇಶಕರು (ಎಂಎಂ) ಶಾಖೆಗೆ ಸಂಬಂಧಿಸಿದ ಕರ್ತವ್ಯಗಳ ನಿರ್ವಹಣೆ, ನೆಟ್‌ವರ್ಕ್ ಆಸ್ಪತ್ರೆಗಳ ನೋಂದಣಿ ಹಾಗು ನವೀಕರಣಕ್ಕೆ ಸಂಬಂಧಿಸಿದ ಕಡತಗಳ ನಿರ್ವಹಣೆ. ನೆಟ್‌ವರ್ಕ್ ಆಸ್ಪತ್ರೆಗಳೊಂದಿಗೆ ಎಂಎಂ ಶಾಖೆಗೆ ಸಂಬಂಧಿಸಿದಂತೆ ಪತ್ರ ವ್ಯವಹಾರ ನಿರ್ವಹಣೆ ಮತ್ತು ನಿರ್ದೇಶಕರು (ಎಂಎಂ) ಹಾಗು ಕಾರ್ಯಕಾರಿ ನಿರ್ದೇಶಕರು ವಹಿಸುವ ಕರ್ತವ್ಯಗಳನ್ನು |

| | | |
|---|---|---|
| | | ನಿರ್ವಹಿಸುವುದು. |
| 36 | ಕಾಲ್ ಸೆಂಟರ್ (Call Centre Team Leader) | ಸಂಯೋಜಕರು (ಕುಂದುಕೊರತೆ) ಇವರ ಸಹಾಯಕರಾಗಿ ಕರ್ತವ್ಯ ನಿರ್ವಹಿಸುವುದು ಮತ್ತು ಕಾಲ್ ಸೆಂಟರ್ ಸಹಾಯಕರುಗಳಿಗೆ ಯೋಜನೆಯ ಕುಂದುಕೊರತೆಯ ಬಗ್ಗೆ ದೂರುಗಳು ಬಂದಲ್ಲಿ ಅವುಗಳನ್ನು ಸಂಯೋಜಕರು (ಕುಂದುಕೊರತೆ) ಇವರ ಗಮನಕ್ಕೆ ತಂದು ಇತ್ಯರ್ಥಗೊಳಿಸುವ ಬಗ್ಗೆ ಕ್ರಮಕೈಗೊಳ್ಳುವುದು ಮತ್ತು ಕಾಲ್ ಸೆಂಟರ್ ಸಹಾಯಕರುಗಳ ಕರ್ತ್ಯವ್ಯ ನಿರ್ವಹಣೆ ಬಗ್ಗೆ ಮೇಲ್ವಿಚಾರಣೆ ನಡೆಸುವುದು. |
| 37 | ಪ್ರಾದೇಶಿಕ ಸಮಾಲೋಚಕರ ಕಛೇರಿಗಳ ಸಹಾಯಕರುಗಳು | ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಯೋಜನೆಗಳಿಗೆ ಸಂಬಂಧಿಸಿದಂತೆ ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಗುಲ್ಬರ್ಗಾ ವಿಭಾಗಗಳ ಪ್ರಾದೇಶಿಕ ಸಮಾಲೋಚಕರ ಕಛೇರಿಗಳಲ್ಲಿ ಆಡಳಿತಾತ್ಮಕ ಸಂಬಂಧಿಸಿದ ಕಾರ್ಯಗಳು, ಗಣಕಯಂತ್ರ ನಿರ್ವಹಣೆ ಕರ್ತವ್ಯಗಳನ್ನು ನಿರ್ವಹಿಸುವುದು ಹಾಗು ಮೇಲಾಧಿಕಾರಿಗಳು ವಹಿಸುವ ಕರ್ತವ್ಯಗಳನ್ನು ನಿರ್ವಹಿಸುವುದು. |
| 38 | ಸ್ವಾಗತಕಾರರು | ನೆಟ್‌ವರ್ಕ್ ಆಸ್ಪತ್ರೆಗಳಿಂದ ಮತ್ತು ಸಾರ್ವಜನಿಕರಿಂದ ಬರುವ ದೂರವಾಣಿ ಕರೆಗಳನ್ನು ಸ್ವೀಕರಿಸಿ ಸೂಕ್ತ ಕ್ರಮವಹಿಸುವುದು ಹಾಗು ಕಾರ್ಯಕಾರಿ ನಿರ್ದೇಶಕರು ವಹಿಸುವ ಕರ್ತವ್ಯಗಳನ್ನು ನಿರ್ವಹಿಸುವುದು. |
| 39 | ಕಿರಿಯ ಲೆಕ್ಕ ಸಹಾಯಕರು | ಸಹಾಯಕರಾಗಿ ಕರ್ತವ್ಯ ನಿರ್ವಹಣೆ ಮತ್ತು ಟ್ರಸ್ಟ್‌ನ ಲೆಕ್ಕ ಶಾಖೆಯ ಲೆಕ್ಕ ವ್ಯವಸ್ಥಾಪಕರ ಸಹಾಯಕರಾಗಿ ಕರ್ತವ್ಯ ನಿರ್ವಹಿಸುವುದು. |
| 40 | ವಾಹನ ಚಾಲಕರು (4) | ಟ್ರಸ್ಟ್‌ನ ವಾಹನಗಳ ನಿರ್ವಹಣೆ ಮತ್ತು ಚಾಲಕರಾಗಿ ಕರ್ತವ್ಯ ನಿರ್ವಹಿಸುವುದು. |
| 41 | ಕಾಲ್ ಸೆಂಟರ್ ಸಹಾಯಕರುಗಳು | ಯೋಜನೆಗಳ ಬಗ್ಗೆ ದೂರವಾಣಿ ಮೂಲಕ ಸ್ವೀಕೃತವಾಗುವ ದೂರಗಳನ್ನು ಗಣಕಯಂತ್ರದಲ್ಲಿ ದಾಖಲಿಸಿ, ದೂರುಗಳ ಬಗ್ಗೆ ಟೀಂ ಲೀಡರ್ ರವರ ಗಮನಕ್ಕೆ ತರುವುದು ಮತ್ತು ಸಾರ್ವಜನಿಕರು ಯೋಜನಗಳ ಬಗ್ಗೆ ಮಾಹಿತಿಯನ್ನು ಕೋರಿದ್ದಲ್ಲಿ ಮಾಹಿತಿಯನ್ನು ಒದಗಿಸುವುದು. |
| 42 | ಆರೋಗಮಿತ್ರ | ಟ್ರಸ್ಟ್ ಮತ್ತು ನೆಟ್‌ವರ್ಕ್ ಆಸ್ಪತ್ರೆಗಳ ಮಧ್ಯೆ ಸಂಪರ್ಕ ಸೇತುವೆಯಾಗಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬರುವ ಫಲಾನುಭವಿಗಳ ದಾಖಲಾತಿಗಳನ್ನು ಪರಿಶೀಲಿಸಿ, ಯೋಜನೆಗೆ ಒಳಪಡುವಂತಹ ಫಲಾನುಭವಿಗಳಿಗೆ ಆಸ್ಪತ್ರೆಯ ಸೌಲಭ್ಯಗಳನ್ನು ಒದಗಿಸುವಂತೆ ನೋಡಿಕೊಳ್ಳುವುದು ಹಾಗೂ ಆಸ್ಪತ್ರೆಯಲ್ಲಿ ಕಾಲಕಾಲಕ್ಕೆ ಚಿಕಿತ್ಸೆ/ಸೌಲಭ್ಯಗಳನ್ನು ಒದಗಿಸುವ ಬಗ್ಗೆ ಮೇಲ್ವಿಚಾರಣೆ ಮಾಡುವುದು. |
| 43 | ಡಿ ದರ್ಜೆ ನೌಕರರು (10+3) | ಕಛೇರಿಯ ಡಿ ದರ್ಜೆ ನೌಕರರ ಕಾರ್ಯವನ್ನು ನಿರ್ವಹಿಸುವುದು. |

**3. ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯ ಮಾರ್ಗಗಳು ಸೇರಿದಂತೆ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ:**

ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ಗೆ ಸಂಬಂಧಿಸಿದಂತೆ ಈ ಕಾರ್ಯ ವಿಧಾನವನ್ನು ಮೂರು ಹಂತಗಳಲ್ಲಿ ಅನುಸರಿಸಲಾಗುತ್ತಿದೆ.

ಅ) ಸರ್ಕಾರವು ಟ್ರಸ್ಟ್ ಸ್ಥಾಪನೆಗೊಳಿಸಿ ಹೊರಡಿಸಿರುವ ಸರ್ಕಾರಿ ಆದೇಶದಲ್ಲಿ ವಿವರಿಸಿರುವಂತೆ ಯೋಜನೆಯ ಅನುಷ್ಠಾನ ಕುರಿತಂತೆ ತೀರ್ಮಾನ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಟ್ರಸ್ಟ್ ಬೋರ್ಡ್ ಪ್ರಥಮ ಹಂತದ್ದಾಗಿರುತ್ತದೆ. ಟ್ರಸ್ಟ್ ಬೋರ್ಡ್‌ನ ಮಟ್ಟದಲ್ಲಿ ತೀರ್ಮಾನ ಕೈಗೊಳ್ಳಬೇಕಾದ ವಿಷಯಗಳಿಗೆ ಪೂರಕವಾದ ಮಾಹಿತಿಯನ್ನು, ಟಿಪ್ಪಣಿಗಳನ್ನು ಹಾಗೂ ಅಂಕಿ ಅಂಶಗಳನ್ನು ಟ್ರಸ್ಟ್ ಕಾರ್ಯಾಲಯವು ಸಿದ್ಧಪಡಿಸಿ, ಅಧ್ಯಕ್ಷರ ಪೂರ್ವಾನುಮತಿಯ ನಂತರ ಬೋರ್ಡ್ ಮುಂದೆ ಮಂಡಿಸಲಾಗುವುದು.

ಆ) ಟ್ರಸ್ಟ್‌ನ ಕಾರ್ಯಕಾರಿ ಸಮಿತಿಯು ತೀರ್ಮಾನ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಎರಡನೇ ಹಂತದ್ದಾಗಿರುತ್ತದೆ. ಬೋರ್ಡ್ ತೀರ್ಮಾನಗಳನ್ನು ಅನುಷ್ಠಾನಗೊಳಿಸುವುದು ಕಾರ್ಯಕಾರಿ ಸಮಿತಿಯ ಕರ್ತವ್ಯವಾಗಿರುತ್ತದೆ. ಹಾಗು

